ಇಂದಿನ ತಂತ್ರಜ್ಞಾನದ ಯುಗದಲ್ಲಿ ಕೇವಲ ಕಪ್ಪುಹಲಗೆ ಮತ್ತು ಸೀಮೆಸುಣ್ಣದ ಬೋಧನೆ ಸಾಲುವುದಿಲ್ಲ. ಶಿಕ್ಷಕರು ತಮ್ಮ ಬೋಧನಾ ಶೈಲಿಯಲ್ಲಿ ನಾವೀನ್ಯತೆಯನ್ನು ತರಬೇಕು. ಪ್ರತಿಯೊಂದು ಸಿದ್ಧಾಂತವನ್ನು ಜೀವನದ ಉದಾಹರಣೆಗಳೊಂದಿಗೆ, ಪ್ರಾಯೋಗಿಕ ಪ್ರಯೋಗಗಳ ಮೂಲಕ ವಿವರಿಸಬೇಕು. ಗಣಿತ ಅಥವಾ ವಿಜ್ಞಾನದಂತಹ ಕಠಿಣ ವಿಷಯಗಳನ್ನು ಸುಲಭಗೊಳಿಸಲು ಸಣ್ಣ ಸಣ್ಣ ಆಟಗಳು, ರಸಪ್ರಶ್ನೆಗಳು ಮತ್ತು ಕಥೆಗಳ ರೂಪದಲ್ಲಿ ಪ್ರಸ್ತುತಪಡಿಸಬೇಕು. ತರಗತಿಯಲ್ಲಿ ಕೆಲವು ಮಕ್ಕಳು ಶೀಘ್ರವಾಗಿ ಕಲಿಯಬಹುದು (ಈಛಿಣ ಐಜಚಿಡಿಟಿಜಿಢಿ), ಇನ್ನು ಕೆಲವು ಮಕ್ಕಳಿಗೆ ಹೆಚ್ಚಿನ ಸಮಯ ಬೇಕಾಗಬಹುದು. ಶಿಕ್ಷಕರು ಪ್ರತಿಯೊಂದು ಮಗುವಿನ ಗ್ರಹಿಕಾ ಶಕ್ತಿಯನ್ನು ಅರಿತು, ಅದಕ್ಕೆ ತಕ್ಕಂತೆ ಬೋಧನೆಯನ್ನು ಮಾರ್ಪಡಿಸಿಕೊಳ್ಳಬೇಕು.

### ಮೌಲ್ಯಾಧಾರಿತ ಶಿಕ್ಷಣ ಮತ್ತು ಜೀವನ ಕೌಶಲಗಳು

ಶಿಕ್ಷಣದ ಮುಖ್ಯ ಉದ್ದೇಶ ಕೇವಲ ಅಂಕಗಳಿಕೆಯನ್ನು ಮಾಡಿಸುವುದಲ್ಲ, ಬದಲಿಗೆ ಮಗುವನ್ನು ಒಬ್ಬ ಉತ್ತಮ ಮಾನವನನ್ನಾಗಿ ರೂಪಿಸುವುದು. ಶಿಕ್ಷಕರು ತಮ್ಮ ಪಾಠದ ಅವಧಿಯಲ್ಲಿ ಮಾನವೀಯ ಮೌಲ್ಯಗಳಾದ ಸತ್ಯ, ಧರ್ಮ, ಶಾಂತಿ, ಪ್ರೇಮ ಮತ್ತು ಅಹಿಂಸೆಯನ್ನು ಪರೋಕ್ಷವಾಗಿ ಬಿತ್ತಬೇಕು. ಗುಂಪು ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಪರಸ್ಪರ ಸಹಕಾರ, ನಾಯಕತ್ವದ ಗುಣ ಮತ್ತು ತಂಡದಲ್ಲಿ ಕೆಲಸ ಮಾಡುವ ಮನೋಭಾವವನ್ನು ಬೆಳೆಸಬೇಕು. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಕ್ಕಳು ಸಣ್ಣ ವಿಷಯಕ್ಕೂ ಒತ್ತಡಕ್ಕೆ ಒಳಗಾಗುತ್ತಾರೆ. ಪರೀಕ್ಷೆಯ ಭಯ, ಸೋಲಿನ ನಿರಾಶೆಯನ್ನು ಎದುರಿಸಲು ಅವರಿಗೆ ಮಾನಸಿಕ ಧೈರ್ಯ ತುಂಬುವ "ಮೈಂಡ್ ಕೋಚಿಂಗ್" ಮತ್ತು ಸಕಾರಾತ್ಮಕ ಚಿಂತನೆಗಳನ್ನು ಬೋಧಿಸಬೇಕು.

### ನಿರಂತರ ಮೌಲ್ಯಮಾಪನ ಮತ್ತು ಪ್ರೋತ್ಸಾಹ

ಮೌಲ್ಯಮಾಪನ ಎನ್ನುವುದು ಮಕ್ಕಳನ್ನು ಹೆದರಿಸುವ ಅಸ್ತ್ರವಾಗಬಾರದು. ಅದು ಅವರ ಕಲಿಕೆಯಲ್ಲಿನ ನ್ಯೂನತೆಗಳನ್ನು ತಿದ್ದುವ ಸಾಧನವಾಗಬೇಕು. ಮಗು ತಪ್ಪು ಮಾಡಿದಾಗ ಎಲ್ಲರ ಮುಂದೆ ನಿಂದಿಸದೆ, ಪ್ರತ್ಯೇಕವಾಗಿ ಕರೆದು ಪ್ರೀತಿಯಿಂದ ತಿದ್ದಬೇಕು. ಮಗು ಸಾಧಿಸಿದ ಸಣ್ಣ ಪ್ರಗತಿಯನ್ನೂ ಸಹ ತರಗತಿಯಲ್ಲಿ ಮುಕ್ತವಾಗಿ ಶ್ಲಾಘಿಸುವುದರಿಂದ ಮಗುವಿನ ಆತ್ಮವಿಶ್ವಾಸ ದುಪ್ಪಟ್ಟಾಗುತ್ತದೆ.

### ವಿದ್ಯಾರ್ಥಿಗಳ ಕರ್ತವ್ಯಗಳು

ಶಿಕ್ಷಣದ ಈ ಇಡೀ ವ್ಯವಸ್ಥೆಯ ಕೇಂದ್ರ ಬಿಂದುವೇ ವಿದ್ಯಾರ್ಥಿ. ಪೋಷಕರು ಮತ್ತು ಶಿಕ್ಷಕರು ಎಷ್ಟು ಶ್ರಮವಹಿಸಿದರೂ, ವಿದ್ಯಾರ್ಥಿಯಲ್ಲಿ ಕಲಿಯುವ ಶ್ರದ್ಧೆ ಮತ್ತು ಜವಾಬ್ದಾರಿಯ ಅರಿವಿಲ್ಲದಿದ್ದರೆ ಯಶಸ್ಸು ಸಾಧ್ಯವಿಲ್ಲ. ಹೊಸ ತರಗತಿಗೆ ಪ್ರಮೋಟ್ ಆಗಿರುವ ವಿದ್ಯಾರ್ಥಿಗಳು ತಮ್ಮ ಜವಾಬ್ದಾರಿಯನ್ನು ಅರಿತು, ಈ ಕೆಳಗಿನ ಅಂಶಗಳನ್ನು ಅಳವಡಿಸಿಕೊಳ್ಳಬೇಕು.

### ವ್ಯವಸ್ಥಿತ ನೆನಪಿನ ಶಕ್ತಿ ಮತ್ತು ಜೋಡಣೆ

ವಿದ್ಯಾರ್ಥಿಗಳು ಕಲಿಕೆಯನ್ನು ಕೇವಲ ಪರೀಕ್ಷೆಗಾಗಿ ಗಿಳಿಪಾಠ ಮಾಡುವ ಹವ್ಯಾಸದಿಂದ ಮುಕ್ತಗೊಳಿಸಬೇಕು. ಯಾವುದೇ ಒಂದು ವಿಷಯವನ್ನು ಕಲಿಯುವಾಗ ಅದನ್ನು ಮನಸ್ಸಿನ "ಫೈಲಿಂಗ್ ಸಿಸ್ಟಮ್" ಗೆ ಒಳಪಡಿಸಬೇಕು. ನಾವು ಓದುವ, ಕೇಳುವ ಪ್ರತಿಯೊಂದು ಹೊಸ ಮಾಹಿತಿಯೂ ನಮ್ಮ ಮೆದುಳಿನ ಸೂಕ್ತವಾದ ಫೋಲ್ಡರ್ ಒಳಗೆ ಹೋಗಿ ಕುಳಿತುಕೊಳ್ಳಬೇಕು.

ಉದಾಹರಣೆಗೆ, ವಿಜ್ಞಾನದ ಪಾಠವನ್ನು ಓದುವಾಗ ಅದನ್ನು ದಿನನಿತ್ಯದ ಪ್ರಕೃತಿಯ ವಿದ್ಯಮಾನಗಳಿಗೆ ಜೋಡಿಸಿ ನೆನಪಿಟ್ಟುಕೊಳ್ಳಬೇಕು. ಸೂತ್ರಗಳನ್ನು ಅಥವಾ ಇತಿಹಾಸದ ಇಸವಿಗಳನ್ನು ಕೇವಲ ಬಾಯಿಪಾಠ ಮಾಡದೆ, ಅದರ ಹಿಂದಿನ ತರ್ಕವನ್ನು ಅರ್ಥಮಾಡಿಕೊಂಡಾಗ ಅದು ದೀರ್ಘಕಾಲದ ಸ್ಮರಣೆಯಾಗಿ ಮಾರ್ಪಡುತ್ತದೆ. ಇದು ಮೆದುಳಿನಲ್ಲಿ ಮಾಹಿತಿಯನ್ನು ವ್ಯವಸ್ಥಿತವಾಗಿ ಜೋಡಿಸಿಡಲು ನೆರವಾಗುತ್ತದೆ.

### ಶಿಸ್ತು, ಏಕಾಗ್ರತೆ ಮತ್ತು ದಿನಚರಿಯ ಪಾಲನೆ

ಯಶಸ್ಸಿನ ರಹಸ್ಯವಿರುವುದು ದೈನಂದಿನ ಶಿಸ್ತಿನಲ್ಲಿ. ಹೊಸ ವರ್ಷದ ಆರಂಭದಿಂದಲೇ ವಿದ್ಯಾರ್ಥಿಗಳು ಕೆಲವು ನಿಯಮಗಳನ್ನು ತಮಗಾಗಿ ರೂಪಿಸಿಕೊಳ್ಳಬೇಕು. ಶಾಲೆಯಲ್ಲಿ ಅಂದು ಮಾಡಿದ ಪಾಠವನ್ನು ಅಂದೇ ಮನೆಯಲ್ಲಿ ಪುನರಾವರ್ತನೆ (ಖಿಜತ್ರುಠಟಿ) ಮಾಡಬೇಕು. ಮನೆಗೆಲಸಗಳನ್ನು ಬಾಕಿ ಉಳಿಸಿಕೊಳ್ಳದೆ ಸಮಯಕ್ಕೆ ಸರಿಯಾಗಿ ಮುಗಿಸಬೇಕು.

**ಪ್ರತಿ ವರ್ಷ ಶಾಲೆ ಆರಂಭವಾದಾಗ ನಾವು ಸಾಮಾನ್ಯವಾಗಿ ಬ್ಯಾಗ್, ಪುಸ್ತಕ, ಯೂನಿಫಾರ್ಮ್, ವೇಳಾಪಟ್ಟಿ ಇವುಗಳ ಬಗ್ಗೆ ಯೋಚಿಸುತ್ತೇವೆ. ಆದರೆ, ಶಾಲೆಯ ಆರಂಭವು ಕೇವಲ ಶೈಕ್ಷಣಿಕ ಚಟುವಟಿಕೆಯ ಪುನರಾರಂಭವಲ್ಲ; ಅದು ಜೀವನದ ಒಂದು ಹೊಸ ಅಧ್ಯಾಯ.ಈ ಸಮಯದಲ್ಲಿ ಅತ್ಯಂತ ಮುಖ್ಯವಾದ ಪ್ರಶ್ನೆ: "ನಾವು ಮಕ್ಕಳನ್ನು ಕೇವಲ ಮುಂದಿನ ತರಗತಿಗೆ ಕಳುಹಿಸುತ್ತಿದ್ದೇವೆಯೇ? ಅಥವಾ ಮುಂದಿನ ಹಂತದ ಜೀವನಕ್ಕೆ ಸಿದ್ಧಗೊಳಿಸುತ್ತಿದ್ದೇವೆಯೇ?"**

ತರಗತಿಯಲ್ಲಿ ಶಿಕ್ಷಕರು ಪಾಠ ಮಾಡುವಾಗ ಸಂಪೂರ್ಣ ಏಕಾಗ್ರತೆಯಿಂದ ಆಲಿಸಬೇಕು. ಸಂದೇಹಗಳಿದ್ದಲ್ಲಿ ಹಿಂಜರಿಕೆಯಿಲ್ಲದೆ, ವಿನಯದಿಂದ ಶಿಕ್ಷಕರನ್ನು ಕೇಳಿ ಬಗೆಹರಿಸಿಕೊಳ್ಳಬೇಕು. ಶಾಲೆಗೆ ಸರಿಯಾದ ಸಮಯಕ್ಕೆ ಹಾಜರಾಗುವುದು, ಪ್ರಾರ್ಥನಾ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು ಶಿಸ್ತಿನ ಮೊದಲ ಹೆಜ್ಜೆ. ಶಾಲೆಯಲ್ಲಿ ನಡೆಯುವ ಸಾಂಸ್ಕೃತಿಕ ಸ್ಪರ್ಧೆಗಳು, ರಸಪ್ರಶ್ನೆಗಳು, ಕ್ರೀಡಾಕೂಟಗಳು, ಎನ್‌ಸಿಸಿ ಅಥವಾ ಸ್ಕೌಟ್ಸ್ ಮುಂತಾದ ಚಟುವಟಿಕೆಗಳಲ್ಲಿ ಭಾಗವಹಿಸಬೇಕು. ಇದು ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸುವುದಲ್ಲದೆ, ವ್ಯಕ್ತಿತ್ವಕ್ಕೆ ಹೊಸ ಆಯಾಮವನ್ನು ನೀಡುತ್ತದೆ.

### ಗೌರವ ಮತ್ತು ಮಾನವೀಯತೆ

ತಮಗೆ ವಿದ್ಯೆ ಕಲಿಸುವ ಗುರು ಹಿರಿಯರಲ್ಲಿ, ಜನ್ಮ ನೀಡಿದ ಪೋಷಕರಲ್ಲಿ ಅತ್ಯಂತ ವಿನಮ್ರತೆಯಿಂದ ನಡೆದುಕೊಳ್ಳಬೇಕು. ಶಾಲೆಯ ಆಸ್ತಿಯನ್ನು ಸ್ವಚ್ಛವಾಗಿಡುವುದು, ಸಹಪಾಠಿಗಳಿಗೆ ಸಹಾಯ ಮಾಡುವುದು ಮತ್ತು ಪ್ರಕೃತಿಯನ್ನು ಗೌರವಿಸುವುದನ್ನು ವಿದ್ಯಾರ್ಥಿಗಳು ತಮ್ಮ ಜೀವನದ ಶೈಲಿಯನ್ನಾಗಿಸಿಕೊಳ್ಳಬೇಕು.

ಶಿಕ್ಷಣದ ಯಶಸ್ಸು ಎನ್ನುವುದು ಯಾವುದೇ ಒಂದು ಘಟಕದ ಮೇಲೆ ಮಾತ್ರ ನಿರ್ಧಾರವಾಗುವುದಿಲ್ಲ. ಇದು ಪೋಷಕರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ನಿರಂತರ ಮತ್ತು ಸಕಾರಾತ್ಮಕ ಸಂವಹನದ ಮೇಲೆ ನಿಂತಿದೆ. ಇದನ್ನು ನಾವು ಒಂದು ಸೈಕಲ್‌ನ ಚಕ್ರಗಳಿಗೆ ಹೋಲಿಸಬಹುದು. ಮುಂದಿನ ಚಕ್ರ ಶಿಕ್ಷಕರಾಗಿದ್ದರೆ, ಹಿಂದಿನ ಚಕ್ರ ಪೋಷಕರು, ಸೈಕಲ್ ಓಡಿಸುವ ಸವಾರನೇ ವಿದ್ಯಾರ್ಥಿ. ಈ ಮೂವರಲ್ಲಿ ಯಾರು ಸಮತೋಲನ ತಪ್ಪಿದರೂ ಪ್ರಗತಿಯ ಪಯಣ ಕುಂಠಿತವಾಗುತ್ತದೆ.

– ಜಗನ್ನಾಥ ನಾಡಿಗೇರ್

## ಒಂದು ಪೋಸ್ಟ್ ಬಾಕ್ಸ್‌ನ ಆತ್ಮಕಥೆ

"ನಾನು... ಒಂದು ಕಾಲದ ಮಧುರ ನೆನಪಾಗಿ ರಸ್ತೆ ಬದಿಯಲ್ಲಿ ಉಳಿದಿರುವ ಪೋಸ್ಟ್ ಬಾಕ್ಸ್ ಮಾತನಾಡುತ್ತಿದ್ದೇನೆ. ಇಂದು ನಾನು ಬೀದಿಯ ಕೊನೆಯಲ್ಲಿ ಯಾರೂ ಕೇಳದ ಅನಾಥ ಕಬ್ಬಿಣದ ತುಂಡಾಗಿ ಬಿದ್ದಿರಬಹುದು. ಆದರೆ ಒಂದು ಕಾಲವಿತ್ತು, ಇಡೀ ಊರನ್ನೇ ಒಂದಾಗಿಸುವ ಪ್ರೀತಿಯ ಸೇತುವೆ ನಾನಾಗಿದ್ದೆ!

ನಾನು ಬಾಯಿ ತೆರೆದು ನಿಂತರೆ ಸಾಕು, ನನ್ನ ಒಡಲಿಗೆ ಜನರ ಕಣ್ಣೀರು, ಕನಸುಗಳು, ಮದುವೆಯ ಮಂತ್ರಾಕ್ಷತೆ ಆಮಂತ್ರಣಗಳು ಮತ್ತು ಉದ್ಯೋಗದ ಶುಭ ವಾರ್ತೆಗಳು ಬಂದು ಬೀಳುತ್ತಿದ್ದವು. ನನ್ನ ಈ ಗಾಢ ಕೆಂಪು ಬಣ್ಣವನ್ನು ದೂರದಿಂದ ನೋಡಿದ ತಕ್ಷಣವೇ ಎಷ್ಟೋ ಜನರ ಹೃದಯದಲ್ಲಿ ಹೊಸ ಆಶಾವಾದಗಳು ಚಿಗುರುತ್ತಿದ್ದವು.

ತಂದೆ–ತಾಯಿ ಬರೆದ ಪ್ರೀತಿಯ ಪತ್ರವನ್ನು ಪುಟಾಣಿ ಮಗುವೊಂದು ಉತ್ಸಾಹದಿಂದ ಓಡಿ ಬಂದು ನನ್ನ ಒಡಲಿಗೆ ಹಾಕುವಾಗ, ಆ ಎಳೆಯ ಕೈಗಳ ಸ್ಪರ್ಶದಲ್ಲಿ ನನಗೆ ವಿವರಿಸಲಾಗದ ಮಮಕಾರ ಸಿಗುತ್ತಿತ್ತು. ಪ್ರೇಮಿಗಳು ಬರೆದ ರಹಸ್ಯ ಪತ್ರಗಳು ನನ್ನ ಹೃದಯದ ಆಳದಲ್ಲಿ ಭದ್ರವಾಗಿದ್ದವು. ಆ ಪತ್ರಗಳು ಎಲ್ಲಿ ಬೇರೆಯವರ ಕೈಗೆ ಸಿಕ್ಕಿಬಿಡುತ್ತವೋ ಎನ್ನುವ ಭಯ ನನಗೂ ಇರುತ್ತಿತ್ತು. ಗಡಿಯಲ್ಲಿ ದೇಶ ಕಾಯುವ ಮಗನ ಕ್ಷೇಮ ಸಮಾಚಾರಕ್ಕಾಗಿ ಕಾಯುವ ತಾಯಿಯ ಕಣ್ಣಿನ ಆತುರ, ಪರೀಕ್ಷೆಯ ಫಲಿತಾಂಶಕ್ಕಾಗಿ ಹಂಬಲಿಸುವ ವಿದ್ಯಾರ್ಥಿಯ ಆತಂಕ, ಉದ್ಯೋಗಕ್ಕಾಗಿ ಸಾವಿರ ಕಣ್ಣುಗಳಿಂದ ಕಾಯುವ ನಿರುದ್ಯೋಗಿಯ ತವಕ... ಇವೆಲ್ಲವನ್ನೂ ಹತ್ತಿರದಿಂದ ಕಂಡವನು ನಾನು.

ನಾನು ಬರಿ ಕಬ್ಬಿಣದ ಡಬ್ಬವಾಗಿರಲಿಲ್ಲ, ಲಕ್ಷಾಂತರ ಜನರ ಭಾವನೆಗಳ ಭಂಡಾರವಾಗಿದ್ದೆ. ಆದರೆ ಈಗ ಕಾಲ ಬದಲಾಗಿದೆ! ಮನುಷ್ಯರ ನಡುವಿನ ಭೌಗೋಳಿಕ ದೂರ ಕಡಿಮೆಯಾಗಿದೆಯಾದರೂ, ಆತ್ಮೀಯತೆ ಮಾಸಿಹೋದಂತಿದೆ. ಎಲ್ಲರ ಕೈಯಲ್ಲೂ ಸ್ಮಾರ್ಟ್‌ಫೋನ್‌ಗಳು ಬಂದಿವೆ. ಕ್ಷಣಾರ್ಧದಲ್ಲಿ ಸಂದೇಶಗಳು ರವಾನೆಯಾಗುತ್ತಿವೆ. ಜನರ ಬೆರಳ ತುದಿಯಲ್ಲೇ ಇಡೀ ಪ್ರಪಂಚ ಚಲಿಸುತ್ತಿದೆ. ಈ ವೇಗದ ಜಗತ್ತಿನಲ್ಲಿ ನನ್ನ ಅಗತ್ಯ ಮುಗಿದುಹೋಗಿದೆ.




ಬಣ್ಣಗೆಟ್ಟು, ತುಕ್ಕು ಹಿಡಿದು ನಿಂತಿರುವ ನನ್ನ ದೇಹವನ್ನು ನೋಡುತ್ತಿದ್ದರೆ, ಶೀಘ್ರದಲ್ಲೇ ನಾನು ಸಂಪೂರ್ಣವಾಗಿ ಕಣ್ಮರೆಯಾಗುತ್ತೇನೆ ಎಂಬ ಸತ್ಯ ನನಗೂ ಗೊತ್ತು. ಇಂದು ನನ್ನ ಮೇಲೆ ಯಾವುದೇ ಪತ್ರಗಳಿಲ್ಲ, ಕೇವಲ ಯಾರೋ ಅಂಟಿಸಿಹೋದ ಅನಾಮಧೇಯ ಪೋಸ್ಟರ್‌ಗಳು ಮತ್ತು ಕಾಲ ಸವಕಳಿಯ ಧೂಳು ಮಾತ್ರ ಉಳಿದಿದೆ.

ಆದರೆ ಒಂದಂತೂ ನಿಜ; ಕೈಯಿಂದ ಕಾಗದದ ಮೇಲೆ ಬರೆದ ಪತ್ರದಲ್ಲಿರುವ ಪ್ರೀತಿ, ಅಕ್ಷರಗಳ ನಡುವೆ ತೇವಗೊಂಡ ಕಣ್ಣೀರಿನ ಗೆರೆಗಳ ಭಾವನೆ ಎಂದಿಗೂ ಈ ಸ್ಮಾರ್ಟ್‌ಫೋನ್ ಸ್ಕ್ರೀನ್‌ಗಳ ಮೇಲೆ ಸಿಗಲು ಸಾಧ್ಯವಿಲ್ಲ. ಡಿಜಿಟಲ್ ಸಂದೇಶಗಳು ಡಿಲೀಟ್ ಆಗಬಹುದು, ಆದರೆ ಕೈಬರಹದ ಪತ್ರ ಬೀರುವಿನ ಮೂಲೆಯಲ್ಲಿ ದಶಕಗಳ ಕಾಲ ಭದ್ರವಾಗಿ ಇರುತ್ತದೆ. ದಶಕಗಳ ಕಾಲ ನಿಮ್ಮ ಕಷ್ಟ–ಸುಖಗಳಲ್ಲಿ ಭಾಗಿಯಾದ ಈ ಮುದುಕ ಟಪಾಲು ಡಬ್ಬದ ಕೃತಜ್ಞತೆಗಳು ನಿಮಗಿರಲಿ. ಸಂದೇಶ ಯಾವುದೇ ಇರಲಿ, ಅದು ಒಂದು ಹೃದಯದಿಂದ ಮತ್ತೊಂದು ಹೃದಯವನ್ನು ತಲುಪುವುದೇ ಮುಖ್ಯ, ಅದು ಯಾವ ರೂಪದಲ್ಲಿದ್ದರೂ ಸರಿ..."

ತಂತ್ರಜ್ಞಾನ ಎಷ್ಟೇ ಮುಂದುವರಿದರೂ ಮತ್ತು ಸಂಪರ್ಕದ ಮಾಧ್ಯಮಗಳು ವೇಗವಾಗಿದ್ದರೂ, ಹಳೆಯ ಕಾಲದ ವೈಯಕ್ತಿಕ ಪತ್ರಗಳಲ್ಲಿದ್ದ ನೈಜ ಪ್ರೀತಿ, ತಾಳ್ಮೆ ಮತ್ತು ಭಾವನಾತ್ಮಕ ಮೌಲ್ಯ ಇಂದಿನ ಡಿಜಿಟಲ್ ಸಂದೇಶಗಳಲ್ಲಿ ಸಿಗುವುದು ಅಪರೂಪ.

## ಹಸಿದ ಕುದುರೆ ಮತ್ತು ಕಬ್ಬಿಣದ ಲಗಾಮು



ಒಂದು ಕುದುರೆ ಇತ್ತು, ಅದು ತುಂಬಾ ವೇಗವಾಗಿ ಓಡುತ್ತಿತ್ತು. ಎಷ್ಟು ವೇಗವಾಗಿ ಅಂದರೆ ಗಾಳಿಯನ್ನೂ ಸೀಳಿ ಮುನ್ನುಗ್ಗುವಷ್ಟು ಸಾಮರ್ಥ್ಯ ಅದಕ್ಕಿತ್ತು. ಆದರೆ, ಅದರ ಬಾಯಿಗೆ ಯಾವಾಗಲೂ ಒಂದು ಸಣ್ಣ ಕಬ್ಬಿಣದ ಲಗಾಮನ್ನು (ಕಲ್ಲೆಂ) ಹಾಕಲಾಗಿರುತ್ತಿತ್ತು.

ಒಂದು ದಿನ ಒಂದು ತೋಳವು ಆ ಕುದುರೆಯನ್ನು ನೋಡಿ ಹೀಗೆ ಕೇಳಿತು, "ನೀನು ಇಷ್ಟೊಂದು ಬಲಿಷ್ಠ ಮತ್ತು ವೇಗವಾಗಿದ್ದೀಯಲ್ಲವೇ? ಆದರೂ ಈ ಪುಟ್ಟ ಕಬ್ಬಿಣದ ಚೂರಿಗೆ ಯಾಕೆ ಶರಣಾಗಿದ್ದೀಯಾ?" ಎಂದು ಆಶ್ಚರ್ಯದಿಂದ ಕೇಳಿತು.

ಆಗ ಕುದುರೆ ನಕ್ಕು ಹೀಗೆ ಉತ್ತರಿಸಿತು:

"ಈ ಕಬ್ಬಿಣದ ಲಗಾಮು ನನ್ನನ್ನು ತಡೆಯುತ್ತಿಲ್ಲ. ಬದಲಿಗೆ ನನ್ನ ಬಾಯಿಗಿರುವ 'ಹಸಿವು' ನನ್ನನ್ನು ಕಟ್ಟಿಹಾಕಿದೆ. ಯಜಮಾನ ಹಾಕುವ ಆ ಒಂದು ಹಿಡಿ ಹುಲ್ಲಿಗಾಗಿ (ಆಹಾರಕ್ಕಾಗಿ), ನಾನು ನನ್ನ ವೇಗ ಮತ್ತು ನನ್ನ ಸ್ವಾತಂತ್ರ್ಯವನ್ನೇ ಮಾರಿಬಿಟ್ಟಿದ್ದೇನೆ."

ಕಥೆಯ ಆಳವಾದ ಸಂದೇಶ (ನೀತಿ):

ನಮ್ಮನ್ನು ಹೊರಗಿನ ವ್ಯಕ್ತಿಗಳು ಅಥವಾ ಪರಿಸ್ಥಿತಿಗಳು ಯಾರೂ ತಡೆಯುತ್ತಿಲ್ಲ. ನಮ್ಮ ಚಿಕ್ಕ–ಪುಟ್ಟ ಅಗತ್ಯಗಳು ಮತ್ತು ಆಸೆಗಳೇ ನಮ್ಮ ಪ್ರಗತಿ ಹಾಗೂ ವೇಗಕ್ಕೆ ಬೇಡಿಯಾಗಿರುತ್ತವೆ.

ಒಂದು ಸಣ್ಣ ಆಸೆಯು ನಮ್ಮ ದೊಡ್ಡ ಸಾಮರ್ಥ್ಯವನ್ನೇ ಹತ್ತಿಕ್ಕಬಲ್ಲದು.

# ಭಾರತದಲ್ಲಿ ಬದಲಾಗಲಿದೆ 50, 100,...

(1ನೇ ಪುಟದಿಂದ)

ನಕಲಿ ಮಾಡೋದು ಕಷ್ಟ. ಭಾರತದಲ್ಲಿ ನಕಲಿ ನೋಟುಗಳ ಹಾವಳಿ ಹೆಚ್ಚಿದೆ. ಇಂಥ ಸಂದರ್ಭದಲ್ಲಿ ಪ್ಲಾಸ್ಟಿಕ್ ನೋಟುಗಳು ಭಾರತಕ್ಕೆ ಸೂಕ್ತ ಎನ್ನಲಾಗಿದೆ.

ಈಗ್ಲೂ ಪ್ಲಾಸ್ಟಿಕ್ ನೋಟುಗಳನ್ನು ಜಾರಿಗೆ ತರುವುದು ಸುಲಭವಲ್ಲ. ಎಟಿಎಂ ಯಂತ್ರಗಳನ್ನು ಹೊಸ ಪರಿಕರಗಳೊಂದಿಗೆ ನವೀಕರಿಸಿದ ನಂತರವೇ ಹೊಸ ಪ್ಲಾಸ್ಟಿಕ್ ನೋಟುಗಳನ್ನು ಜಾರಿಗೆ ತರಬೇಕು. ಪ್ಲಾಸ್ಟಿಕ್ ನೋಟಿಗೆ ಸಂಬಂಧಿಸಿದ ಪರಿಕರಗಳನ್ನು ಯಂತ್ರಗಳಲ್ಲಿ ಅಳವಡಿಸಲು ಈಗಾಗಲೇ ಪ್ಲಾಸ್ಟಿಕ್ ನೋಟುಗಳನ್ನು ಬಳಸುತ್ತಿರುವ ದೇಶಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗ್ತಿದೆ.


ಕಥೆ-ಕವನ, ಚುಟುಕು, ಮಕ್ಕಳು ಬಿಡಿಸಿದ ಚಿತ್ರಗಳನ್ನು ಪ್ರಕಟಿಸುವ ವಿಭಾಗ

9740137083


## ದಿನಕ್ಕೊಂದು ಚುಟುಕು

ಕರಗಿಸು ನವ ಸೃಷ್ಟಿಯಾಗಲಿ
ಬೇಯಿಸು ಅನ್ನದ ಒಡಲ್ಹುಡಿಯಾಗಲಿ
ಕೂಡಿಸು ರುಚಿಯು ಮರುಕಳಿಸಲಿ
ಜೀವನವೊಂದು ರಸಪಾಕ ಆನಂದಿಸಲಿ

– ಡಾ. ಮಮು

## ದಿನಕ್ಕೊಂದು ನುಡಿ ಮುತ್ತು

ಅವಶ್ಯಕತೆಯನ್ನೂ ಮೀರಿ
ನೀವು ಒಬ್ಬರಿಗೆ ಸಹಾಯ
ಮಾಡಿದ್ದೇ ಆದಲ್ಲಿ
ಆ ಸಹಾಯವು ಅವರಿಗೆ
ಅನಾವಶ್ಯಕ ಎಂದೆನಿಸಿ,
ನಿಮ್ಮ ಸಹಕಾರವು
ನಿರರ್ಥಕವಾಗುತ್ತದೆಯೇ
ವಿನಃ ಒಳಿತಾಗಲಾರದು.

– ಮಂಜುಳಾ ಪ್ರಸಾದ್ ದಾವಣಗೆರೆ




ಪತ್ರಿಕೆಗಳಿಗೆ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
08192–254186


# ರಾಣೇಬೆನ್ನೂರು: ಸಹಾಯಧನಕ್ಕೆ ವಿಜ್ಞಾನ ಮಾದರಿ ಆಯ್ಕೆ



ದಾ ನಗರವಾಣಿ ಸುದ್ದಿ

ರಾಣೇಬೆನ್ನೂರು, ಮೇ.30: ಶ್ರೀ ತರಳಬಾಳು ಜಗದ್ಗುರು ತಾಂತ್ರಿಕ ಮಹಾವಿದ್ಯಾಲಯದ ಅಂತಿಮ ವರ್ಷದ ಇನ್‌ಫರ್ಮೇಶನ್ ಸೈನ್ಸ್ ಆಂಡ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳು " ವಾಲ್ಯೂಮ್ ಕಂಟ್ರೋಲ್ ಯೂಸಿಂಗ್ ಹ್ಯಾಂಡ್ ಗೆಸ್ಚರ್ ರೆಕಗ್ನಿಷನ್ " ಎಂಬ ಪ್ರಾಜೆಕ್ಟ್ ಗೆ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯಿಂದ ಅನುಮೋದನೆಗೊಂಡು ಸಹಾಯಧನವನ್ನು ಕೊಡಲಾಗಿದೆ.

ಈ ಪ್ರಾಜೆಕ್ಟ್ ಅನ್ನು ವಿದ್ಯಾರ್ಥಿಗಳಾದ ಸಂಜನಾ ಎಸ್ ಬಣಕಾರ್, ರಕ್ಷಿತಾ, ಬಿ. ಶರತ್ ತಯಾರಿಸಿದ್ದಾರೆ. ಇವರಿಗೆ ಡಾ. ಡಿ. ಎಸ್. ವಿಶ್ವನಾಥ್ ಮಾರ್ಗದರ್ಶಕರಾಗಿದ್ದರು. ಈ ವಿದ್ಯಾರ್ಥಿಗಳನ್ನು ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಎಸ್. ಜಿ. ಮಕನೂರ ಮತ್ತು ಎಲ್ಲಾ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

## ಕಾಂಗ್ರೆಸ್ ಶಾಸಕಾಂಗ ....

(1ನೇ ಪುಟದಿಂದ) ಪಕ್ಷದ ಸಭೆಗೂ ಮುನ್ನ ಡಿಕೆ ಶಿವಕುಮಾರ್ ಅವರು ಬೆಂಗಳೂರಿನ ಅಜ್ಜಯ್ಯನ ಪೀಠಕ್ಕೆ ತೆರಳಿ ನಮಸ್ಕರಿಸಿ ಬಂದರು. ಆ ಬಳಿಕವೂ ವಿಧಾನಸೌಧಕ್ಕೆ ಆಗಮಿಸಿ ಕೊಠಡಿಯೊಂದರಲ್ಲಿ ಒಬ್ಬರೇ ದೇವರ ಪ್ರಾರ್ಥನೆ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಿಎಂ ಪ್ರಮಾಣ ವಚನಕ್ಕೆ ದಿನಾಂಕ ಫಿಕ್ಸ್: ಇನ್ನೊಂದೆಡೆ ಕರ್ನಾಟಕ ನೂತನ ಸಿಎಂ ಆಗಿ ಡಿಕೆ ಶಿವಕುಮಾರ್ ಪ್ರಮಾಣ ವಚನಕ್ಕೆ ದಿನಾಂಕ ನಿಗದಿಯಾಗಿದೆ. ಜೂನ್ 3, ಬುಧವಾರ ಸಂಜೆ 4.05 ಕ್ಕೆ ಬೆಂಗಳೂರಿನ ಲೋಕಭವನದ ಗಾಜಿನ ಮನೆಯಲ್ಲಿ ಕಾರ್ಯಕ್ರಮ ನಡೆಯಲಿದೆ.

# ನಾಡಿನ ಕಲಾವಿದರನ್ನು ಪ್ರೋತ್ಸಾಹಿಸಿ...

ನಮ್ಮ ಸಂಘಟನೆಯಲ್ಲಿ ರಾಜ್ಯವ್ಯಾಪಿ 17500 ಕಲಾವಿದರು ಸದಸ್ಯತ್ವ ಹೊಂದಿದ್ದಾರೆ. ರಾಜ್ಯದಲ್ಲಿ ಒಟ್ಟು 50ಲಕ್ಷ ರಂಗಕರ್ಮಿ, ಜಾನಪದ ಪ್ರಕಾರಗಳ ಕಲಾವಿದರಿದ್ದಾರೆ. ಕಾರ್ಮಿಕರಿಗೆ ಸಿಗುವ ಸೌಲಭ್ಯಗಳು ಕಲಾವಿದರಿಗೂ ಸಿಗಬೇಕು. ಆನ್ ಲೈನ್ ಅರ್ಜಿ ಆಹ್ವಾನದಿಂದ ಗ್ರಾಮೀಣ ಭಾಗದ ಮಹಿಳಾ ಕಲಾವಿದರು ವಂಚಿತರಾಗುತ್ತಿದ್ದು ಸಂಘಟನೆಯನ್ನು ಹೋಬಳಿ ಮಟ್ಟಕ್ಕೆ ವಿಸ್ತರಿಸಿ ಬಲಪಡಿಸಲಾಗುವುದು. ಮುಂದಿನ ಬಜೆಟ್‌ನಲ್ಲಿ ಕಲಾವಿದರ ಭದ್ರತೆಗಾಗಿ 5000 ಕೋಟಿ ಅನುದಾನ ಮೀಸಲಿಡಲು ವಿಧಾನಸೌಧ ಚಲೋ ಕರೆನೀಡಲಾಗುವುದು.

**ವೀರೇಂದ್ರ ಪ್ರಸಾದ್** (ಗುಬ್ಬಿವೀರಣ್ಣ),
ರಾಜ್ಯಾಧ್ಯಕ್ಷ, ಕರ್ನಾಟಕ ಕಲಾವಿದರ ಒಕ್ಕೂಟ.

(1ನೇ ಪುಟದಿಂದ) ನಮ್ಮ ತಂದೆ ಶಾಸಕ ಬಿ.ದೇವೇಂದ್ರಪ್ಪ ಅವರೂ ಒಬ್ಬ ಹವ್ಯಾಸಿ ಕಲಾವಿದರಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಕಲೆಗಳು ಕಣ್ಮರೆ ಆಗುತ್ತಿವೆ ಮುಂದಿನ ಪೀಳಿಗೆಗೆ ಕಲೆ ಪಸರಿಸಬೇಕಿದೆ ಎಂದು ತಿಳಿಸಿದರು.

ಇಪ್ಪರಗಿ ಮಠದ ಮಾತೃಶ್ರೀ ಅನುರಾಧೇಶ್ವರಿ ಅಮ್ಮ ಮಾತನಾಡಿ, ಗುಬ್ಬಿ ವೀರಣ್ಣನವರು 35– 40 ವರ್ಷಗಳ ಕೆಳಗೆ ರಂಗಭೂಮಿ ಕಲೆಯನ್ನು ಬೆಳೆಸಿಕೊಂಡು ಬಂದಿರುತ್ತಾರೆ. ಇವರ ಹೋರಾಟದ ಫಲವಾಗಿ ಗುಬ್ಬಿಯಲ್ಲಿ ಎಂಟು ಕೋಟಿ ವೆಚ್ಚದ ಗುಬ್ಬಿ ವೀರಣ್ಣ ರಂಗಮಂದಿರ ನಿರ್ಮಾಣಗೊಂಡಿದೆ. ಇದರ ಜೊತೆಗೆ ಕಣ್ಣಿನ ಶಸ್ತ್ರಚಿಕಿತ್ಸೆ ಆದ ಕಲಾವಿದರಿಗೆ ಆಸ್ಪತ್ರೆ ವೆಚ್ಚ, ಕಲಾವಿದರ ಮಕ್ಕಳಿಗೆ ಉಚಿತವಾಗಿ ಪುಸ್ತಕ ಪರಿಕರಗಳನ್ನು ನೀಡುವುದರ ಮುಖಾಂತರ ಉತ್ತಮ ಸೇವೆಗೈಯುತ್ತಿದ್ದಾರೆ ಎಂದು ಹೇಳಿದರು.

ವೇದಿಕೆಯಲ್ಲಿ ಒಟ್ಟು 21 ಸಾಧಕರಿಗೆ ರಾಜ್ಯ ಮಟ್ಟದ ಕರ್ನಾಟಕ ಜಾನಪದ ಪ್ರಶಸ್ತಿ ಹಾಗೂ ಕರ್ನಾಟಕ ರಂಗ ಪದ್ಮಶ್ರೀ, ಕರ್ನಾಟಕ ಚಿತ್ರ ಪದ್ಮಶ್ರೀ ಬಿರುದು ಪ್ರದಾನ ಮಾಡಲಾಯಿತು. ಎಲ್ಲಾ ಕಲಾ ತಂಡದವರಿಗೆ ಪ್ರಶಸ್ತಿಯನ್ನು ನೀಡಿ ಸನ್ಮಾನ ಮಾಡಲಾಯಿತು. ಕಾರ್ಯಕ್ರಮಕ್ಕೂ ಮುನ್ನ ವಿವಿಧ ಕಲಾ ತಂಡಗ ಳೊಂದಿಗೆ ಅಂಬೇಡ್ಕರ್ ವೃತ್ತದಿಂದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ವೇದಿಕೆಗೆ ಆಗಮಿಸಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡ ಬಿಸ್ತುವಳ್ಳಿ ಬಾಬು,ರಾಜಕೀಯ ವಿಶ್ಲೇಷಕ ರಾಜು ಗೌಡ,ಕಲಾವಿದರ ಒಕ್ಕೂಟದ ಪದಾಧಿಕಾರಿಗಳಾದ ಮರೇನಹಳ್ಳಿ ಕುಮಾರ,ಡಿ ಕೆಂಪಣ್ಣ, ವೃಷಬೇಂದ್ರ, ಕುಮಾರ್, ಸುಮಾ, ಬಸವರಾಜ್, ಭಾರತಿ, ಭರತೇಶ್, ಶಾರದಮ್ಮ, ಸಂದೀಪ್ ಸೇರಿದಂತೆ ವಿವಿಧ ಜಿಲ್ಲೆ,ತಾಲ್ಲೂಕುಗಳ ಕಲಾವಿದರು ಇದ್ದರು.

# ಎಸ್‌ಐಆರ್ ಅಲ್ಪ ಸಂಖ್ಯಾತರ ವಿರೋಧಿ...

(1ನೇ ಪುಟದಿಂದ)

ನಮ್ಮ ಹೆಸರನ್ನು ತಪ್ಪು ಬರೆದಿರುವುದು ನಿಮ್ಮ ಅಧಿಕಾರಿಗಳು. ನಮ್ಮ ನಾಗರೀಕತೆಯನ್ನು ಸಾಬೀತುಪಡಿಸಿ ಎನ್ನುವುದು ಯಾವ ನ್ಯಾಯ? ಇದು ಮೊದಲ ಹೆಜ್ಜೆ. ನಮ್ಮ ಮತದಾನ ಕಸಿಯುವ ಪ್ರಯತ್ನ ಮಾಡಿದರೆ ಈ ಹೋರಾಟ ತೀವ್ರಗೊಳ್ಳಲಿದೆ. ಬೇರೆ ದೇಶದಿಂದ ನಮ್ಮ ದೇಶದಲ್ಲಿ ಅಕ್ರಮವಾಗಿ ಒಳ ನುಸುಳಿದ್ದರೆ ತೆಗೆದು ಹಾಕಲಿ. ಆದರೆ ಇದರ ಹೆಸರಿನಲ್ಲಿ ದೇಶದ ನಾಗರೀಕರ ಹಕ್ಕನ್ನು ಕಸಿಯುವ ಕೆಲಸ ಮಾಡಿದರೆ ಸಹಿಸುವುದಿಲ್ಲ ಎಂದರು.

ಮಹಿಳಾ ಮುಖಂಡರಾದ ಸಲಾಂ ಅವರು ಮಾತನಾಡಿ, ಕೇಂದ್ರ ಸರ್ಕಾರ ಅಲ್ಪ ಸಂಖ್ಯಾತರನ್ನು, ದಲಿತರನ್ನು ಎಂದಿಗೂ ಶೋಷಣೆ ಮಾಡುತ್ತಲೇ ಬಂದಿದೆ. ಎಸ್‌ಐಆರ್ ಕಾನೂನಿಗೆ ವಿದ್ಯಾವಂತರು ಹೇಗೋ ದಾಖಲೆಗಳನ್ನು ಸಂಗ್ರಹಿಸುತ್ತಾರೆ. ಆದರೆ ಅವಿದ್ಯಾವಂತರು ಏನು ಮಾಡಬೇಕು. ಎಸ್‌ಐಆರ್ ಸಿಎ, ಎನ್‌ಆರ್‌ಸಿಗಿಂತ ಅಪಾಯಕಾರಿಯಾಗುದ್ದು, ಇದರ ವಿರುದ್ಧ ಜಾತಿ, ಧರ್ಮ ಬಿಟ್ಟು ಎಲ್ಲರೂ ಒಂದಾಗಬೇಕು ಎಂದರು.

ಪ್ರಾಧ್ಯಾಪಕ ದಾದಾಪೀರ್ ನವಿಲೇಹಾಳ್ ಮಾತನಾಡಿ, ಎಸ್‌ಐಆರ್‌ಗೆ ಪರಿಷ್ಕರಣೆಯ ಉದ್ದೇಶ ಇಲ್ಲ. ಒಂದು ಪಕ್ಷದ ಮತದಾರರನ್ನು ಕಾಪಾಡಿ, ಮತ್ತೊಂದು ಪಕ್ಷದ ಮತದಾರರನ್ನು ಮತದಾನದಿಂದ ಹೊರಗಿಡುವ ವಿಶೇಷ ಉದ್ದೇಶವನ್ನು ಹೊಂದಿರುವ ಕ್ರಮ. ಕೇಂದ್ರ ಚುನಾವಣಾ ಆಯೋಗ, ಇಡಿ ಅಂತಹ ಸಂಸ್ಥೆಗಳು ಒಂದು ಪಕ್ಷದ ಪರ ಕೆಲಸ ಮಾಡುತ್ತಿರುವುದು ಖಂಡನೀಯ ಎಂದರು.

ನಾವು ಎಷ್ಟೇ ವಿರೋಧ ಮಾಡಿದರೂ ಎಸ್‌ಎಆರ್ ಪ್ರಕ್ರಿಯೆ ಲೋಕಸಭೆಯ ಬಹುಮತದ ಆಧಾರದ ಮೇಲೆ ನಡೆದೇ ನಡೆಯುತ್ತದೆ. ಹಾಗಾಗಿ ಈ ಪ್ರಕ್ರಿಯೆಯಲ್ಲಿ ಎಲ್ಲರೂ ಎಚ್ಚರಿಕೆಯಿಂದ ಭಾಗವಹಿಸಬೇಕು. ಓರ್ವ ಅರ್ಹ ಮತದಾರರ ಹೆಸರು ಕೂಡ ಬಿಟ್ಟು ಹೋಗದಂತೆ ನೋಡಿಕೊಳ್ಳುವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿ ಎಂದರು.

ನಂತರ ಅಪರ ಜಿಲ್ಲಾಧಿಕಾರಿ ಶೀಲವಂತ್ ಶಿವಕುಮಾರ್ ಮೂಲಕ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಪ್ರಗತಿಪರ ಸಂಘಟನೆಯ ಸಂಚಾಲಕರಾದ ಅನೀಸ್ ಪಾಷ, ನಿವೃತ್ತ ಎಸ್ಪಿ ರವಿ ನಾರಾಯಣ್, ಜಸ್ಟಿನ್ ಜೈ ಕುಮಾರ್, ದಿನೇಶ್ ಕೆ ಶೆಟ್ಟಿ, ಹೆಚ್.ಸಿ. ಮಲ್ಲಪ್ಪ, ತಾಹಿರ್, ಹಾಲಪ್ಪ, ಅಯೂಬ್ ಪೈಲ್ವಾನ್, ಅನಿತಾ ಬಾಯಿ, ಮೈನುದ್ದೀನ್, ಸಲ್ಮಾ, ಎಸ್ ಮಲ್ಲಿಕಾರ್ಜುನ್, ಗಿರೀಶ್, ಪ್ರಕಾಶ, ಮಂಜುನಾಥ, ಅಂಜನಪ್ಪ ಮತ್ತು ಇತರರು ಹಾಜರಿದ್ದರು.

# ವಿದ್ಯುತ್ ಖಾಸಗೀಕರಣಕ್ಕೆ ಬಿಡೋದಿಲ್ಲ...

(1ನೇ ಪುಟದಿಂದ) ರಾಜ್ಯದ ಬೆಸ್ಕಾಂ, ಮೆಸ್ಕಾಂ, ಚೆಸ್ಕಾಂ, ಜೆಸ್ಕಾಂ ನಿಗಮಗಳ 19 ಜಿಲ್ಲೆಗಳಲ್ಲಿ ವಿದ್ಯುತ್ ಸಾವಿರಾರು ಕೋಟಿ ರೂಪಾಯಿ ಮೌಲ್ಯದ ವಿತರಣಾ ಕೇಂದ್ರಗಳನ್ನು ಟಾಟಾ ಪವರ್ ಕಂಪನಿ ಲಿಮಿಟೆಡ್ ಗೆ ವಹಿಸುತ್ತಿರುವುದನ್ನು ಇಂದು ಒಕ್ಕೊರಲಿನಿಂದ ವಿರೋಧಿಸುತ್ತೇವೆ, ಖಾಸಗಿ ಕಂಪನಿಗಳು ತಮ್ಮ ಲಾಭವನ್ನೇ ಮುಖ್ಯವಾಗಿ ನೋಡುತ್ತವೆಯೇ ಹೊರತು, ಜನಸಾಮಾನ್ಯರ ಬೇಕು ಬೇಡಗಳ ಬಗ್ಗೆ ಯೋಚನೆ ಮಾಡುವುದಿಲ್ಲ. ಆದ್ರಿಂದ ಸರ್ಕಾರಗಳು ಬೆಳೆಗಳಿಗೆ ಸೂಕ್ತ ರೀತಿಯಲ್ಲಿ ಎಲ್ಲಾ ಬೆಳೆಗಳಿಗೂ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿ ಮಾಡಬೇಕು ಮತ್ತು ವಿದ್ಯುತ್ ವಿತರಣಾ ಕೇಂದ್ರಗಳ ಖಾಸಗೀಕರಣವನ್ನು ಕೂಡಲೇ ಕೈ ಬಿಡಬೇಕು ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ತೀವ್ರ ತರದ ಹೋರಾಟವನ್ನು ರಾಜ್ಯ ಸರ್ಕಾರ ಎದುರಿಸಬೇಕಾದೀತು ಎಂದು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಹೆಚ್.ಜಿ.ಉಮೇಶ್, ಮಧುತೊಗಲೇರಿ, ಸತೀಶ್ ಅರವಿಂದ್, ಹೊನ್ನೂರು ಮುನಿಯಪ್ಪ, ಐರಣಿ ಚಂದ್ರು, ಪಿ.ಪಿ.ಮರುಳಸಿದ್ದಯ್ಯ, ಪ್ರಕಾಶ್, ಲಕ್ಷ್ಮಣ್, ನಾಗರಾಜ ರೆಡ್ಡಿ, ನೀತಿಗೆರೆ ಲಿಂಗೇಶ್ ಇತರರು ಇದ್ದರು.

# “ಯೋಗ ಮತ್ತು ಆರೋಗ್ಯ”

- ಶ್ರೀಮತಿ ಲಾವಣ್ಯ ಎಸ್. ಪಿ.

## ಓಂಕಾರದ ಮಹತ್ವ



ಪರಿಚಯ: ಯೋಗದಲ್ಲಿ ಓಂಕಾರಕ್ಕೆ (Om) ಅತ್ಯಂತ ಉನ್ನತ ಮತ್ತು ಪವಿತ್ರವಾದ ಸ್ಥಾನವಿದೆ. ಇದು ಬ್ರಹ್ಮಾಂಡದ ಮೂಲ ಧ್ವನಿ ಎಂದು ನಂಬಲಾಗಿದೆ. ಯೋಗ ಮತ್ತು ಧ್ಯಾನದಲ್ಲಿ ಓಂಕಾರ ಪಠಿಸುವುದರಿಂದ ಏಕಾಗ್ರತೆ ಹೆಚ್ಚುತ್ತದೆ, ಮನಸ್ಸು ಶಾಂತವಾಗುತ್ತದೆ ಮತ್ತು ಒತ್ತಡ ಕಡಿಮೆಯಾಗಿ ದೇಹದಲ್ಲಿ ಸಕಾರಾತ್ಮಕ ಶಕ್ತಿ ಸಂಚಲನಗೊಳ್ಳುತ್ತದೆ. ಓಂಕಾರವು (ಪ್ರಣವ ಮಂತ್ರ) ಹಿಂದೂ ಧರ್ಮ ಮತ್ತು ಭಾರತೀಯ ಆಧ್ಯಾತ್ಮಿಕತೆಯಲ್ಲಿ ಅತ್ಯಂತ ಪವಿತ್ರವಾದ, ಮೂಲಭೂತವಾದ ಶಬ್ದವಾಗಿದೆ. ಇದು ಕೇವಲ ಒಂದು ಧಾರ್ಮಿಕ ಚಿಹ್ನೆ ಅಥವಾ ಮಂತ್ರವಲ್ಲ; ಇದು ಇಡೀ ಬ್ರಹ್ಮಾಂಡದ ಸೃಷ್ಟಿ, ಸ್ಥಿತಿ ಮತ್ತು ಲಯವನ್ನು ಪ್ರತಿನಿಧಿಸುವ ವಿಶ್ವದ ಧ್ವನಿಯಾಗಿದೆ. ವೇದಗಳು, ಉಪನಿಷತ್ತುಗಳು ಮತ್ತು ಭಗವದ್ಗೀತೆಯಲ್ಲಿ ಓಂಕಾರಕ್ಕೆ ಅತ್ಯುನ್ನತ ಸ್ಥಾನವನ್ನು ನೀಡಲಾಗಿದೆ.

ಓಂಕಾರದ ಸಂಯೋಜನೆ ಮತ್ತು ಅರ್ಥ: ಓಂಕಾರವು ಮುಖ್ಯವಾಗಿ ಮೂರು ಅಕ್ಷರಗಳ ಸಂಯೋಜನೆಯಿಂದ ಸೃಷ್ಟಿಯಾಗಿದೆ.

* ಅ (A): ಇದು ಸೃಷ್ಟಿಯ ಸಂಕೇತ (ಬ್ರಹ್ಮ) ಜಾಗೃತಾವಸ್ಥೆಯನ್ನು ಪ್ರತಿನಿಧಿಸುತ್ತದೆ (ಹೊಟ್ಟೆಯ ಭಾಗದಲ್ಲಿ ಕಂಪನ). * ಉ (U): ಇದು ಸ್ಥಿತಿ ಅಥವಾ ಪಾಲನೆಯ ಸಂಕೇತ (ವಿಷ್ಣು). ಸ್ವಪ್ನಾವಸ್ಥೆಯನ್ನು ಪ್ರತಿನಿಧಿಸುತ್ತದೆ. (ಎದೆಯ ಭಾಗದಲ್ಲಿ ಅನುರಣನ). * ಮ (M): ಇದು ಲಯ ಅಥವಾ ವಿಸರ್ಜನೆಯ ಸಂಕೇತ (ಶಿವ ಮಹೇಶ್ವರ). ಸುಷುಪ್ತಿ (ಗಾಢ ನಿದ್ರೆ) ಸ್ಥಿತಿಯನ್ನು ಪ್ರತಿನಿಧಿಸುತ್ತದೆ. (ತಲೆಯ ಭಾಗದಲ್ಲಿ ಕಂಪನ). ಈ ಮೂರು ಅಕ್ಷರಗಳ ನಂತರ ಬರುವ ಮೌನವು (ತುರೀಯಾವಸ್ಥೆ) ಪರಮಾತ್ಮನೊಂದಿಗಿನ ಸಂಪರ್ಕವನ್ನು ಸೂಚಿಸುತ್ತದೆ.

* ಆಧ್ಯಾತ್ಮಿಕ ಮಹತ್ವ:

ದೈವಿಕ ಸಂಪರ್ಕ: ಓಂಕಾರದ ನಿರಂತರ ಜಪವು ಮನಸ್ಸಿಗೆ ಅಪಾರ ಶಾಂತಿ ನೀಡುತ್ತದೆ ಮತ್ತು ಏಕಾಗ್ರತೆಯನ್ನು ಹೆಚ್ಚಿಸುತ್ತದೆ.ಯೋಗ ಮತ್ತು ಧ್ಯಾನ: ಧ್ಯಾನ ಮತ್ತು ಪ್ರಾಣಾಯಾಮ ಮಾಡುವಾಗ ಓಂಕಾರವನ್ನು ಜಪಿಸುವುದು ಮನಸ್ಸನ್ನು ಆಧ್ಯಾತ್ಮಿಕತೆಯತ್ತ ಕೊಂಡೊಯ್ಯುತ್ತದೆ. ಮಂತ್ರಗಳ ಮೂಲ: ಎಲ್ಲಾ ವೇದ ಮಂತ್ರಗಳು ಓಂಕಾರದಿಂದಲೇ ಪ್ರಾರಂಭವಾಗುತ್ತವೆ. ಇದು ದೈವಿಕ ಶಕ್ತಿಯ ಸಂಕೇತವಾಗಿದೆ.

* ಆರೋಗ್ಯದ ಮೇಲಿನ ಪ್ರಭಾವ:

ಓಂಕಾರವನ್ನು ಉಚ್ಚರಿಸುವುದರಿಂದ ಉಂಟಾಗುವ ಕಂಪನಗಳು ಶ್ವಾಸಕೋಶ, ಹೃದಯ ಮತ್ತು ನರಮಂಡಲವನ್ನು ಉತ್ತೇಜಿಸುತ್ತವೆ. ಇದು ಒತ್ತಡವನ್ನು ಕಡಿಮೆ ಮಾಡಿ, ರಕ್ತ ಸಂಚಲನವನ್ನು ಸುಗಮಗೊಳಿಸುತ್ತದೆ ಎಂದು ನಂಬಲಾಗಿದೆ.

ವಿಶ್ವವ್ಯಾಪಿ ಮಹತ್ವ:

ಓಂಕಾರವನ್ನು ಕೇವಲ ಹಿಂದೂ ಧರ್ಮವಷ್ಟೇ ಅಲ್ಲದೆ, ಬೌದ್ಧ, ಜೈನ ಮತ್ತು ಸಿಖ್ ಧರ್ಮಗಳಲ್ಲೂ ಪವಿತ್ರ ಚಿಹ್ನೆಯಾಗಿ ಬಳಸಲಾಗುತ್ತದೆ. ಇದು ಸರ್ವಧರ್ಮ ಸಮನ್ವಯತೆಯ ಪ್ರತೀಕವಾಗಿದೆ.

ಆರೋಗ್ಯ ಮತ್ತು ವೈಜ್ಞಾನಿಕ:

ಪ್ರಯೋಜನಗಳು ಆಧುನಿಕ ವಿಜ್ಞಾನವೂ ಸಹ ಓಂಕಾರದ ಜಪದಿಂದ ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕೆ ಆಗುವ ಪ್ರಯೋಜನಗಳನ್ನು ಒಪ್ಪಿಕೊಂಡಿದೆ.

1.ಮಾನಸಿಕ ಶಾಂತಿ: ಓಂಕಾರವನ್ನು ನಿಯಮಿತವಾಗಿ ಪಠಿಸುವುದರಿಂದ ಮನಸ್ಸಿನ ಒತ್ತಡ, ಆತಂಕ ಮತ್ತು ಕೋಪ ಕಡಿಮೆಗೊಂಡು ಮಾನಸಿಕ ಪ್ರಶಾಂತತೆ ಸಿಗುತ್ತದೆ. 2.ಏಕಾಗ್ರತೆ ವೃದ್ಧಿ. ವಿದ್ಯಾರ್ಥಿಗಳು ಓಂಕಾರ ಧ್ಯಾನ ಮಾಡುವುದರಿಂದ ನೆನಪಿನ ಶಕ್ತಿ ಮತ್ತು ಏಕಾಗ್ರತೆ ಹೆಚ್ಚುತ್ತದೆ. 3.ಧನಾತ್ಮಕ ಶಕ್ತಿ: ಓಂಕಾರದ ಉಚ್ಚಾರಣೆಯಿಂದ ದೇಹದ ನರನಾಡಿಗಳು ಉತ್ತೇಜಿತಗೊಂಡು, ಸುತ್ತಮುತ್ತಲಿನ ವಾತಾವರಣದಲ್ಲಿ ಧನಾತ್ಮಕ ಶಕ್ತಿ (Positive Energy) ಹರಡುತ್ತದೆ. 4.ಉಸಿರಾಟದ ಸುಧಾರಣೆ: ಇದರ ಪಠಣವು ಶ್ವಾಸಕೋಶದ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಮತ್ತು ರಕ್ತದೊತ್ತಡವನ್ನು ನಿಯಂತ್ರಣದಲ್ಲಿಡಲು ಸಹಾಯ ಮಾಡುತ್ತದೆ.

ಉಪಸಂಹಾರ: ಯೋಗದ ಆರಂಭದಲ್ಲಿ ಮತ್ತು ಕೊನೆಯಲ್ಲಿ ಓಂಕಾರವನ್ನು ಪಠಿಸುವುದರಿಂದ ಇಡೀ ದೇಹಕ್ಕೆ ಹೊಸ ಚೈತನ್ಯ ಬರುತ್ತದೆ. ಇದು ಯಾವುದೇ ಒಂದು ಧರ್ಮ ಅಥವಾ ಜಾತಿಗೆ ಸೀಮಿತವಾಗಿಲ್ಲ. ಅದು ಇಡೀ ಮಾನವಕುಲಕ್ಕೆ ಪ್ರಕೃತಿ ನೀಡಿರುವ ಮಹಾನ್ ಕೊಡುಗೆಯಾಗಿದೆ. ಧನಾತ್ಮಕ ಶಕ್ತಿಯನ್ನು ಜಾಗೃತಗೊಳಿಸುವ ಈ ವಿಶ್ವವ್ಯಾಪಿ ಧ್ವನಿಯನ್ನು ಪ್ರತಿದಿನ ಧ್ವನಿಸುವುದರಿಂದ ದೈಹಿಕ ಆರೋಗ್ಯ, ಮಾನಸಿಕ ನೆಮ್ಮದಿ ಹಾಗೂ ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸಬಹುದು. ಪ್ರತಿದಿನ ಬೆಳಿಗ್ಗೆ ಕನಿಷ್ಠ 10 ರಿಂದ 15 ನಿಮಿಷಗಳ ಕಾಲ ಓಂಕಾರವನ್ನು ಪಠಿಸುವುದರಿಂದ ಆರೋಗ್ಯಕರ, ಶಾಂತಿಯುತ ಮತ್ತು ಅರ್ಥಪೂರ್ಣ ಜೀವನವನ್ನು ನಡೆಸಬಹುದು.

ಏನಾದರೂ ಸಂದೇಹಗಳಿದ್ದರೆ ಈ ನಂಬರಿಗೆ ಸಂಪರ್ಕಿಸಿ : 8762089106

ಯೋಗಾಸನಗಳನ್ನು ಯೋಗ ಶಿಕ್ಷಕರ ಮಾರ್ಗದರ್ಶನದಲ್ಲಿ ಮಾಡಬೇಕು. ಪತ್ರಿಕೆ ಓದಿ ಸ್ವಯಂ ಅಭ್ಯಾಸ ಒಳ್ಳೆಯದಲ್ಲ

# ಜಗತ್ತಿನ ಅತಿದೊಡ್ಡ ರಾಜಕೀಯ ಪಕ್ಷ ಬಿಜೆಪಿ...

(1ನೇ ಪುಟದಿಂದ) ಪ್ರಾಮಾಣಿಕವಾಗಿ ಸೇವೆ ಮಾಡುವಂತೆ ಕಾರ್ಯಕರ್ತರಿಗೆಕರೆ ನೀಡಿದರು.

ಶಿವಮೊಗ್ಗ ವಿಭಾಗದ ಶಾರೀರಿಕ ಪ್ರಮುಖ ಪ್ರಕಾಶ ಹರಳಹಳ್ಳಿ ಮಾತನಾಡಿ, ರಾಜಕೀಯ ಪಕ್ಷದಲ್ಲಿ ಕಾರ್ಯಕರ್ತರಿಗೆ ಪ್ರಶಿಕ್ಷಣ ನೀಡುವ ಪದ್ಧತಿ ಬಿಜೆಪಿ ಪಕ್ಷದಲ್ಲಿ ಮಾತ್ರವಿದೆ, ಅಧಿಕಾರಕ್ಕಾಗಿ ಈ ಪಕ್ಷವನ್ನು ಕಟ್ಟಿಲ್ಲ, ಸೈದ್ಧಾಂತಿಕ ತಳಹದಿಯಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದರು.

ಪಂ.ದೀನದಯಾಳ ಉಪಾಧ್ಯಾಯ ನೆನಪಿನಲ್ಲಿ ದೇಶಾದ್ಯಂತ ಈ ರೀತಿಯ ಪ್ರಶಿಕ್ಷಣ ಕಾರ್ಯಾಗಾರವನ್ನು ಮಾಡುತ್ತಿದ್ದು ತಳಮಟ್ಟದಿಂದ ಕಾರ್ಯಕರ್ತರನ್ನು ಗಟ್ಟಿಗೊಳಿಸುವುದೇ ಇದರ ಮೂಲ ಉದ್ದೇಶವಾಗಿದೆ ಎಂದ ಅವರು, ಬಿಜೆಪಿ ಪಕ್ಷಕ್ಕೆ ಕಾರ್ಯಕರ್ತರೆ ಆಸ್ತಿ ಎಂದರು.

ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ಪ್ರಾಸ್ತಾವಿಕವಾಗಿ ಮಾತನಾಡಿ, ಪ್ರಶಿಕ್ಷಣ ವರ್ಗ ಪಕ್ಷ ಸಂಘಟನೆಗೆ ಪೂರಕ ಮತ್ತು ಕಾರ್ಯಕರ್ತರಲ್ಲಿ ಒಗ್ಗಟ್ಟು ಶಿಸ್ತು ಮೂಡಿಸಲು ಉತ್ತಮ ವೇದಿಕೆ ಒದಗಿಸಲಿದೆ ಎಂದರು.

ಸಂಘಟಿತ ಶಕ್ತಿ ಸಮರ್ಪಣಾ ಮನೋಭಾವ ಹಾಗೂ ಜನಸೇವೆಯೇ ಬಿಜೆಪಿಯ ಮೂಲ ತತ್ವಗಳಾಗಿವೆ, ಪ್ರತಿಯೊಬ್ಬ ಕಾರ್ಯಕರ್ತರೂ ಪಕ್ಷದ ಸಿದ್ಧಾಂತಗಳನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಇನ್ನಷ್ಟು ಬದ್ಧತೆಯಿಂದ ಕಾರ್ಯ ನಿರ್ವಹಿಸುವಂತೆ ಹೇಳಿದರು.

ಪ್ರಶಿಕ್ಷಣದಲ್ಲಿ ಬಿಜೆಪಿ ಇತಿಹಾಸ–ವಿಕಾಸ, ಬೂತ್ ನಿರ್ವಹಣೆ, ಸಾಮಾಜಿಕ ಮತ್ತು ಮಾಧ್ಯಮ, ಕಾರ್ಯವಿಸ್ತರಣೆ ನಮ್ಮ ದೃಷ್ಟಿಕೋನ, ನಮ್ಮ ಸರ್ಕಾರಗಳ ಸಾಧನೆಗಳು, ನಮ್ಮ ಕಾರ್ಯ ಪದ್ಧತಿ ಹಾಗೂ ಸೈದ್ಧಾಂತಿಕ ಅಧಿಷ್ಠಾನ ಎನ್ನುವ ವಿಷಯಗಳ ಬಗ್ಗೆ ಅರಿವು ಮೂಡಿಸಲಾಯಿತು.

ಗ್ರಾಮಾಂತರ ಘಟಕದ ಅಧ್ಯಕ್ಷ ಲಿಂಗರಾಜ್ ಹಿಂಡಸಘಟ್ಟ ಹಾಗೂ ನಗರಾಧ್ಯಕ್ಷ ಅಜೀತ್ ಸಾವಂತ್ ಅಧ್ಯಕ್ಷತೆ ವಹಿಸಿದ್ದರು.

ಈ ವೇಳೆ ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಐರಣಿ ಅಣ್ಣೇಶ್, ನಗರಸಭೆ ಮಾಜಿ ಸದಸ್ಯ ಅಟೋ ಹನುಮಂತಪ್ಪ, ಅಶ್ವಿನಿ ಕೃಷ್ಣಾ, ಪುರಸಭಾ ಸದಸ್ಯ ಸಿದ್ದೇಶ ಬೆಣ್ಣಿಹಳ್ಳಿ, ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಮಂಜಾನಾಯ್ಕ, ತುಳಜಪ್ಪ ಭೂತೆ, ಕೆ.ಎನ್. ಹಳ್ಳಿ ಮಹಾಂತೇಶ್, ವೀರೇಶ್ ಆದಾಪುರ, ಮುಖಂಡರಾದ ರಾಜುರೋಖಡೆ, ಬಾತಿ ಚಂದ್ರಶೇಖರ್,ಮಹಿಳಾ ಘಟಕದ ಪ್ರಮೀಳಾ ನಲ್ಲೂರು, ರೂಪಾಕಾಟ್ವೆ, ಸಂತೋಷಿ ಮೋಹಿತೆ, ಸಾಕ್ಷಿ ಶಿಂದೆ, ಅಂಬುಜಾ ರಾಜೋಳಿ, ರಶ್ಮಿ ಮೆಹರ್ವಾಡೆ, ರೂಪಾ ಶಶಿಕಾಂತ್ ಹಾಗೂ ಇತರರಿದ್ದರು.

# ಶೀಘ್ರ ಕೇಂದ್ರ ಸಂಪುಟ ಪುನಾರಚನೆ...

(1ನೇ ಪುಟದಿಂದ) ಕಾರ್ಪೊರೇಟ್ ವ್ಯವಹಾರಗಳು ಮತ್ತು ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಖಾತೆ ರಾಜ್ಯ ಸಚಿವ ಹರ್ಷ್ ಮಲ್ಹೋತ್ರಾ ಅವರನ್ನು ದೆಹಲಿ ಬಿಜೆಪಿ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಈ ಸ್ಥಾನಗಳನ್ನು ಸಂಸತ್ತಿನ ಎರಡೂ ಸದನಗಳ ಹೊಸಬರಿಗೆ ನೀಡುವ ನಿರೀಕ್ಷೆಯಿದೆ.

ಪಕ್ಷವು ಕರ್ನಾಟಕ ಬಿಜೆಪಿ ಮುಖ್ಯಸ್ಥರಾಗಿ ಕ್ಯಾಬಿನೆಟ್ ಸಚಿವರನ್ನು ನೇಮಿಸುವ ಸಾಧ್ಯತೆಯಿದೆ. ಮಣಿಪುರ ಬಿಜೆಪಿಗೆ ಹೊಸ ಅಧ್ಯಕ್ಷರನ್ನು ಘೋಷಿಸಲು ಸಿದ್ಧತೆ ನಡೆಸುತ್ತಿದೆ. ರಾಜ್ಯಸಭೆಯ ಮೂಲಕ ಕೇಂದ್ರ ಸಚಿವ ಸಂಪುಟದಲ್ಲಿ ಮಣಿಪುರಕ್ಕೆ ಪ್ರಾತಿನಿಧ್ಯ ಕಲ್ಪಿಸಲು ಬಿಜೆಪಿ ಅವಕಾಶ ನೀಡಬಹುದು ಎಂದು ಮೂಲಗಳು ಸೂಚಿಸಿವೆ.

# ಪ್ರಮಾಣ ವಚನ ಸರಳವಾಗಿರಲಿದೆ...

(1ನೇ ಪುಟದಿಂದ) ಆದರೆ, ಶನಿವಾರ ನಡೆದ ಸಭೆಗಳಲ್ಲಿ ಕಾರ್ಯಕ್ರಮ ಸರಳವಾಗಿರಲಿದೆ ಎಂದು ಕೆಪಿಸಿಸಿ ಮುಖಂಡರು ತಿಳಿಸಿದ್ದಾರೆ.

ಈ ಬಗ್ಗೆ ಮಾಹಿತಿ ಹಂಚಿಕೊಂಡ ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ತಿಳಿಸಿದ್ದಾರೆ. ಪ್ರಮಾಣ ವಚನ ಜೂನ್ 3 ರಂದು ಲೋಕಭವನದ ಗಾಜಿನ ಮನೆಯಲ್ಲಿ ನಡೆಯಲಿದೆ. ಅತ್ಯಂತ ಸರಳವಾಗಿ ನಡೆಯಲಿದೆ. ಯಾವುದೇ ಪಾಸ್ ವ್ಯವಸ್ಥೆ ಮಾಡಿಲ್ಲ. ಜಿಲ್ಲಾವಾರು ಹೆಚ್ಚಿನ ಸಂಖ್ಯೆಯಲ್ಲಿ ಬರುವುದು ಬೇಡ ಎಂದು ಮನವಿ ಮಾಡಿದರು.

ಜಿಲ್ಲಾಮಟ್ಟದಲ್ಲಿ ಕಾರ್ಯಕ್ರಮ: ಮುಂದಿನ ದಿನಗಳಲ್ಲಿ ಜಿಲ್ಲಾ ಕೇಂದ್ರಗಳಲ್ಲಿ ಕಾರ್ಯಕ್ರಮ ಆಯೋಜನೆ ಮಾಡಲಾಗುತ್ತ ದೆ. ನೂತನ ಸಿಎಂ ಖುದ್ದು ಜಿಲ್ಲೆಗಳಿಗೆ ಬಂದು ಜನರನ್ನು ಭೇಟಿ ಮಾಡುತ್ತಾರೆ. ಆಗ ಕಾರ್ಯಕರ್ತರು ಆಗಮಿಸಲಿ. ನೂತನ ಸಿಎಂಗೆ ಶುಭ ಕೋರಲಿ ಎಂದು ತಿಳಿಸಿದರು.

# ಜ್ಞಾನದ ಅಪ್‌ಡೇಟ್ ಇಲ್ಲದಿದ್ದರೆ....

(1ನೇ ಪುಟದಿಂದ) ಕಾರಣವಾಯಿತು" ಎಂದರು.

ಕಾರ್ಯಕ್ರಮದಲ್ಲಿ ಚಳ್ಳಕೆರೆ ಶಾಸಕ ಟಿ.ರಘುಮೂರ್ತಿ, ವಿಟಿಯು ಕುಲಪತಿ ವಿದ್ಯಾಶಂಕರ್, ಸೀತಾರಾಮ್, ಮಾಜಿ ಸಂಸದ ಜನಾರ್ದನ ಸ್ವಾಮಿ, ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನ ಹಳೆಯ ವಿದ್ಯಾರ್ಥಿ ಹಾಗೂ ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್(ಎಐಸಿಟಿಇ) ಮಾಜಿ ಅಧ್ಯಕ್ಷರಾದ ಪ್ರೊ. ಟಿ.ಜಿ. ಸೀತಾರಾಮ್, ಕಾಲೇಜು ಪ್ರಾಂಶುಪಾಲ ಡಾ.ಡಿ.ಪಿ.ನಾಗರಾಜಪ್ಪ, ಎಂ.ಎಚ್.ದಿವಾಕರ್ ಇತರರು ಉಪಸ್ಥಿತರಿದ್ದರು.


## ಗ್ರಾಮ ಪಂಚಾಯಿತಿ ಕಾರ್ಯಾಲಯ, ಅಣಬೇರು. ದಾವಣಗೆರೆ ತಾಲ್ಲೂಕು.

E-mail:-anaberu.dvg.dvg@gmail.com ದೂ. ಸಂಖ್ಯೆ: 8095203003

ಸಂ.ಗ್ರಾ.ಪಂ.ಕಾ.ಅಣಬೇರು/ಆ.ಟೆಂ.ಇ.ಪ್ರೊ/2026–27
ದಿನಾಂಕ: 27.05.2026

### ಸಂಕ್ಷಿಪ್ತ ಟೆಂಡರ್ ಪ್ರಕಟಣೆ

('ಕೆಪಿಪಿಪಿ–ಪ್ರೊಕ್ಯೂರ್‌ಮೆಂಟ್" ಮೂಲಕ)

ಈ ವಿಭಾಗ ವ್ಯಾಪ್ತಿಯ ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು 2025–26ನೇ ಸಾಲಿನ ವರ್ಗ–1 ಯೋಜನೆ, 2025–26ನೇ ಸಾಲಿನ 15ನೇ ಹಣಕಾಸು ಯೋಜನೆ ಮತ್ತು 2024–25ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರ ಅನುದಾನದ ಯೋಜನೆಯಡಿ ಅನುಮೋದನೆಯಾದ ಕಾಮಗಾರಿಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಕೆಪಿಪಿಪಿ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕೆಪಿಪಿಪಿ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ನ್ನು ಏಕ–ಲಕೋಟೆಯಲ್ಲಿ ಕೆ.ಡಬ್ಲ್ಯೂ ನಮೂನೆ–1 ಆಹ್ವಾನಿಸಲಾಗಿದೆ. ಒಟ್ಟು ಕಾಮಗಾರಿಗಳ ಸಂಖ್ಯೆ: 04 ಅಂದಾಜು ಮೊತ್ತ ರೂ.1.80 ಲಕ್ಷಗಳಿಂದ ಮೊತ್ತ ರೂ.3.30 ಲಕ್ಷಗಳು ಇರುತ್ತದೆ. ಕಾಮಗಾರಿಯ ಸ್ವರೂಪ, ಕಟ್ಟಡಕ್ಕೆ ಟೈಲ್ಸ್ ಅಳವಡಿಸುವುದು ಮತ್ತು ಸಿ.ಸಿ.ಚರಂಡಿ ನಿರ್ಮಾಣ ಕಾಮಗಾರಿ. ದಿನಾಂಕ: 27/05/2026 ರಿಂದ ಟೆಂಡರ್ ಫಾರಂಗಳನ್ನು ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ: 11/06/2026 ಸಂಜೆ 4–00 ಘಂಟೆಯವರೆಗೆ ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ: 8095203003 ಅಥವಾ www.KPPP.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ವಾಸಾಇ/ದಾವಣಗೆರೆ/108/ಕೆಎಸ್‌ಎಂಸಿಎ/2026–27

ಸಹಿ/–ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು
ಗ್ರಾಮ ಪಂಚಾಯಿತಿ, ಅಣಬೇರು



## DAVANGERE SUGAR COMPANY LIMITED

L10721KA1970PLC001949 - 73/1, Post Box No.312, Shamanur Road, Davangere 577004.
Email: davangeresugars@gmail.com - accounts@davangeresugars.com - website: www.davangeresugar.com

### Extract of Standalone Audited Financial Results for the quarter and year ended March 31, 2026

(Rs. in Lakhs except EPS)

| Sr. No | Particulars | Quarter Ended | Year ended | |
|---|---|---|---|---|
| | | 31.03.2026 | 31.03.2026 | 31.03.2025 |
| 1 | Revenue from Operations<br>Other income | 8,382.38<br>66.53 | 23,877.26<br>232.63 | 21,498.53<br>177.07 |
| | **Total Income** | **8,448.91** | **24,109.89** | **21,675.60** |
| 2 | Net Profit / (Loss) for the period before Tax, (before Exceptional and/or Extraordinary items) | 140.79 | 1,098.91 | 1,285.90 |
| 3 | Net Profit / (Loss) for the period before tax (after Exceptional and/or Extraordinary items) | 140.79 | 1,098.91 | 1,285.90 |
| 4 | Net Profit / (Loss) for the period after tax (after Exceptional and/or Extraordinary items) | 194.99 | 850.66 | 1,093.71 |
| 5 | Total Comprehensive Income for the period [Comprising Profit / (Loss) for the period (after tax) and Other Comprehensive Income (after tax)] | 212.95 | 740.59 | 1,083.11 |
| 6 | **Equity Share Capital** | **14,299.91** | **14,299.91** | **9,408.45** |
| 7 | Earnings Per Share (for continuing and discontinued operations)<br>1. Basic:<br>2. Diluted: | <br>0.01<br>0.01 | <br>0.05<br>0.05 | <br>0.12<br>0.12 |

NOTE: a) a) The above results for the quarter and year ended 31st March 2026 have been reviewed by the Audit Committee and approved by Board of Directors at its meeting held on May 29, 2026. b) The above is an extract of the detailed format of quarter and year ended Financial Results filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The full formats of the quarter and year ended Financial Results are available on the websites of stock exchange i.e., www.bseindia.com, www.nseindia.com and on the website of the Company i.e., www.davangeresugar.com and can be accessed through the given QR code.

Place: Davangere
Date : 29th May, 2026

For DAVANGERE SUGAR COMPANY LIMITED
Sd/- Ganesh S Shamanur
Managing Director
DIN: 00451383



## ಗೀತಾಂಜಲಿ

ದಿನ 4 ಆಟಗಳು
ಜನಭರಿತ 5ನೇ ವಾರ
ಕನ್ನಡ ಚಿತ್ರ
ಸಮಯ: ಬೆ: 11ಕ್ಕೆ, ಮ: 2ಕ್ಕೆ, ಸಂ: 6ಕ್ಕೆ, ರಾ: 9ಕ್ಕೆ





ಧ್ರುವ ಸರ್ಜಾ, ರೀಷ್ಮಾ ನಾಣಯ್ಯ ಇತರರು ನಟಿಸಿರುವ ಚಿತ್ರ

## ಅಶೋಕ

ದಿನ 4 ಆಟಗಳು
21-05-2026ರಿಂದ ಪ್ರಾರಂಭ
ticket avabale bookmyshow
ತೆಲುಗು-ತಮಿಳು ಚಿತ್ರ
ಸಮಯ: ತೆಲುಗು: ಮ:2ಕ್ಕೆ, ಸಂಜೆ: 6ಕ್ಕೆ, ತಮಿಳು: ರಾತ್ರಿ: 9ಕ್ಕೆ:




ಬೆಳಿಗ್ಗೆ 11ಕ್ಕೆ

ಗೋಲ್ಡನ್ ಕ್ಲಾಸ್: 250 ರೂ, ಬಾಲ್ಕನಿ: 200 ರೂ, ಫಸ್ಟ್ ಕ್ಲಾಸ್: 150 ರೂ

## ವಸಂತ 4K

DOLBY ATMOS
ದಿನ 4 ಆಟಗಳು
28-05-2026ರಿಂದ ಪ್ರಾರಂಭ
Tickets are available in bookmyshow
ತೆಲುಗು–ತಮಿಳು ಚಿತ್ರ
ಸಮಯ: ತೆಲುಗು: ಬೆ:11, ಮ:2–ತಮಿಳು: ಸಂ:6, ರಾ:9ಕ್ಕೆ




ಅರ್ಜುನ್ ಸರ್ಜಾ ಸೇರಿದಂತೆ ಇತರರು ನಟಿಸುರುವ ಬ್ಲಾಸ್ಟ್ ತೆಲುಗು ಚಿತ್ರ

# ಐಪಿಎಲ್ 2026ರ ಮಹಾಸಮರ ಇಂದು ಕಿರೀಟಕ್ಕಾಗಿ ಜಿದ್ದಾಜಿದ್ದಿ!




ಕ್ರಿಕೆಟ್ ಪ್ರೇಮಿಗಳೇ, ಹಾರ್ಟ್ ಬೀಟ್ ಹೆಚ್ಚಿಸಿಕೊಳ್ಳಲು ರೆಡಿಯಾಗಿ! ಕಳೆದ ಎರಡು ತಿಂಗಳುಗಳಿಂದ ಧಗಧಗಿಸುತ್ತಿದ್ದ ಐಪಿಎಲ್ ಕ್ರಿಕೆಟ್ ಮಹಾಯುದ್ಧ ಈಗ ಕ್ಲೈಮ್ಯಾಕ್ಸ್ ಹಂತಕ್ಕೆ ಬಂದು ನಿಂತಿದೆ.

ಇಂದು ಜಗತ್ತಿನ ಅತ್ಯಂತ ಶ್ರೀಮಂತ ಮತ್ತು ರೋಚಕ ಕ್ರಿಕೆಟ್ ಲೀಗ್‌ನ ಫೈನಲ್ ಫೈಟ್ ನಡೆಯಲಿದ್ದು, ಟ್ರೋಫಿ ಯಾರ ಮುಡಿಗೇರಲಿದೆ ಎಂಬ ಕುತೂಹಲ ಗರಿಷ್ಠ ಮಟ್ಟ ತಲುಪಿದೆ.

ಇಡೀ ಟೂರ್ನಿಯಲ್ಲಿ ರನ್ ಮಳೆ ಹರಿಸಿದ, ವಿಕೆಟ್ ಬೇಟೆಯಾಡಿದ ಎರಡು ಅತ್ಯಂತ ಬಲಿಷ್ಠ ತಂಡಗಳು ಇಂದು ಮುಖಾಮುಖಿಯಾಗುತ್ತಿವೆ. ಈ ಹೈ-ವೋಲ್ಟೇಜ್ ಪಂದ್ಯದ ಕಂಪ್ಲೀಟ್ ರೋಚಕ ಡಿಟೇಲ್ಸ್ ಇಲ್ಲಿವೆ:

ಕ್ರಿಕೆಟ್ ಪ್ರೇಮಿಗಳೇ, ಕಾತರದಿಂದ ಕಾಯುತ್ತಿದ್ದ ಕ್ಷಣ ಬಂದೇ ಬಿಟ್ಟಿದೆ! ಮೇ 31ರ ಇಂದು ಸಂಜೆ ಅಹಮದಾಬಾದ್‌ನನರೇಂದ್ರಮೋದಿ ಸ್ಟೇಡಿಯಂನಲ್ಲಿ ಡಿಫೆಂಡಿಂಗ್ ಚಾಂಪಿಯನ್ಸ್‌ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಮಾಜಿ ಚಾಂಪಿಯನ್ಸ್ ಗುಜರಾತ್ ಟೈಟಾನ್) ನಡುವೆ ಐಪಿಎಲ್ 2026ರ ಪ್ರಶಸ್ತಿಗಾಗಿ ಮಹಾ ಯುದ್ಧ ನಡೆಯಲಿದೆ.

ಕಿಂಗ್– ಪ್ರಿನ್ಸ್ ಕದನ: ಕಿಂಗ್ ವಿರಾಟ್ ಕೊಹ್ಲಿ ಮತ್ತು ಟೈಟಾನ್ಸ್ ನಾಯಕ ಶುಭ್‌ಮನ್ ಗಿಲ್ ನಡುವಿನ ಈ ಬಿಗ್ ಫೈಟ್ ಅಭಿಮಾನಿಗಳಲ್ಲಿ ಭಾರಿ ಕುತೂಹಲ ಮೂಡಿಸಿದೆ.

ಇತಿಹಾಸ ಸೃಷ್ಟಿಸುವತ್ತ ಆರ್‌ಸಿಬಿ: ಕಳೆದ ವರ್ಷ (2025) ರಜತ್ ಪಾಟೀದಾರ್ ನಾಯಕತ್ವದಲ್ಲಿ ಮೊದಲ ಟ್ರೋಫಿ ಗೆದ್ದಿದ್ದ ಆರ್‌ಸಿಬಿ, ಈ ಬಾರಿ ಗೆದ್ದರೆ ಸಿಎಸ್‌ಕೆ ಮತ್ತು ಮುಂಬೈ ನಂತರ ಸತತ ಎರಡನೇ ಬಾರಿ ಟ್ರೋಫಿ ಉಳಿಸಿಕೊಂಡ ಮೂರನೇ ತಂಡ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ.

ಸೇಡಿನ ಹೊಗೆಯಲ್ಲಿ ಜಿಟಿ: ಕ್ವಾಲಿಫೈಯರ್ 1 ರಲ್ಲಿ ಆರ್‌ಸಿಬಿ ವಿರುದ್ಧ ಅನುಭವಿಸಿದ 92 ರನ್‌ಗಳ ಸೋಲಿಗೆ, ಗುಜರಾತ್ ತನ್ನದೇ ತವರು ಮೈದಾನದಲ್ಲಿ ಸೇಡು ತೀರಿಸಿಕೊಳ್ಳಲು ಸಜ್ಜಾಗಿದೆ.

ಮುಖಾಮುಖಿ: ಜಿದ್ದಾಜಿದ್ದಿನ ಕದನ: ಇದು ಕೇವಲ ಬ್ಯಾಟ್ ಮತ್ತು ಬಾಲ್ ನಡುವಿನ ಹೋರಾಟವಲ್ಲ. ಇದು ಇಬ್ಬರು ಚಾಣಾಕ್ಷ ಕ್ಯಾಪ್ಟನ್‌ಗಳ ಮೈಂಡ್ ಗೇಮ್. ಒಂದು ಕಡೆ ಪವರ್‌ಪ್ಲೇನಲ್ಲೇ ಎದುರಾಳಿಗಳನ್ನು ಧೂಳೀಪಟ ಮಾಡುವ ಸ್ಫೋಟಕ ಬ್ಯಾಟಿಂಗ್ ಲೈನ್‌ಅಪ್ ಇದ್ದರೆ, ಇನ್ನೊಂದು ಕಡೆ ಡೆತ್ ಓವರ್‌ಗಳಲ್ಲಿ ರನ್ ಕದಿಯಲು ಬಿಡದ ಕರಾರುವಾಕ್ ಬೌಲಿಂಗ್ ಬೆಟಾಲಿಯನ್ ಇದೆ.

ಹಳೇ ಹಗೆ, ಹೊಸ ಇತಿಹಾಸ: ಈ ಸೀಸನ್‌ನಲ್ಲಿ ಈಗಾಗಲೇ ಮುಖಾಮುಖಿಯಾಗಿದ್ದಾಗ ಉಭಯ ತಂಡಗಳಲ್ಲಿ ಆರ್‌ಸಿಬಿ ಎರಡು ಮ್ಯಾಚ್, ಜಿಟಿ ಒಂದು ಮ್ಯಾಚ್ ಗೆದ್ದು ಬೀಗಿವೆ. ಹಾಗಾಗಿ ನಾಳಿನ ಪಂದ್ಯ "ಅಸಲಿ ಬಾಸ್" ಯಾರು ಎಂಬುದನ್ನು ನಿರ್ಧರಿಸಲಿದೆ.

ಪವರ್‌ಪ್ಲೇ ಧಮಾಕಾ: ಆರಂಭಿಕ ಓವರ್‌ಗಳಲ್ಲೇ ಸಿಕ್ಸರ್-ಬೌಂಡರಿಗಳ ಸುರಿಮಳೆಗೈಯುವ ಓಪನರ್‌ಗಳನ್ನು ಕಟ್ಟಿಹಾಕಲು ಎದುರಾಳಿ ತಂಡದ ಸ್ವಿಂಗ್ ಮಾಸ್ಟರ್ಸ್ ಯಾವ ಪ್ಲಾನ್ ಮಾಡಲಿದ್ದಾರೆ ಎಂಬುದು ರೋಚಕ.

ಮಿಡಲ್ ಆರ್ಡರ್ ಮ್ಯಾಜಿಕ್: ಸ್ಪಿನ್ನರ್‌ಗಳ ವಿರುದ್ಧ ಅಬ್ಬರಿಸುವ ಮಿಡ್ಲ್ ಆರ್ಡರ್ ಬ್ಯಾಟರ್ಸ್ ಹಾಗೂ ಗೂಗ್ಲಿ ಮೂಲಕ ವಿಕೆಟ್ ಉರುಳಿಸುವ ಮಿಸ್ಟರಿ ಸ್ಪಿನ್ನರ್‌ಗಳ ನಡುವಿನ ಫೈಟ್ ಪಂದ್ಯದ ಗತಿಯನ್ನೇ ಬದಲಿಸಲಿದೆ.

ಕೊನೆಯ ಓವರ್‌ಗಳ ಹೈ ಡ್ರಾಮಾ: ಇತ್ತೀಚಿನ ಪಂದ್ಯಗಳಲ್ಲಿ ಕೊನೆಯ ಓವರ್‌ಗಳಲ್ಲಿ ಸಿಕ್ಸರ್ ಸಿಡಿಸಿ ಗೆಲ್ಲುವ ಟ್ರೆಂಡ್ ಹೆಚ್ಚಾಗಿದೆ. ಇಂದು ಕೂಡ ಪಂದ್ಯ ಕೊನೆಯ ಬಾಲ್‌ವರೆಗೂ ಹೋದರೆ ಅಚ್ಚರಿಯಿಲ್ಲ!

ಮಹಾ ಫೈನಲ್‌ನಲ್ಲಿ ಸಾಲ್ಟ್ ಆಡುವ ಸಾಧ್ಯತೆ: ಗುಜರಾತ್ ಟೈಟಾನ್ಸ್ ವಿರುದ್ಧದ ಕ್ವಾಲಿಫೈಯರ್ 1 ಪಂದ್ಯದ ವೇಳೆಗೆ ಅವರು ವಿದೇಶಿ ಆಟಗಾರ ಫಿಲ್ ಸಾಲ್ಟ್ ಫಿಟ್ ಆಗಿದ್ದರೂ, ತಂಡದ ಮ್ಯಾನೇಜ್‌ಮೆಂಟ್ ಅವರನ್ನು ಆಡಿಸುವ ರಿಸ್ಕ್ ತೆಗೆದುಕೊಂಡಿರಲಿಲ್ಲ. ಆದರೆ, ಭಾನುವಾರ ನಡೆಯಲಿರುವ ಗುಜರಾತ್ ಟೈಟಾನ್ಸ್ ವಿರುದ್ಧದ ಮಹಾ ಫೈನಲ್ ಪಂದ್ಯದಲ್ಲಿ ಫಿಲ್ ಸಾಲ್ಟ್ ಆರ್‌ಸಿಬಿ ಪರ ಕಣಕ್ಕಿಳಿಯುವ ಎಲ್ಲಾ ಸಾಧ್ಯತೆಗಳಿವೆ. ಅವರು ಪ್ಲೇಯಿಂಗ್ ಇಲೆವೆನ್‌ಗೆ ಮರಳಿದರೆ ವಿರಾಟ್ ಕೊಹ್ಲಿ ಜೊತೆಗೂಡಿ ಮತ್ತೊಮ್ಮೆ ಆರ್‌ಸಿಬಿಗೆ ಸ್ಫೋಟಕ ಆರಂಭ ನೀಡಲಿದ್ದಾರೆ. ಅವರು ಆರ್‌ಸಿಬಿ ಮರಳಲಿ ಎಂಬುದು ಅಭಿಮಾನಿಗಳ ಬಹುಬೇಡಿಕೆಯೂ ಕೂಡ ಆಗಿದೆ.

# ಬೀಜ, ರಸಗೊಬ್ಬರ ಕೊರತೆಯಾಗದಂತೆ ಕ್ರಮ ಕೈಗೊಳ್ಳಿ; ಸಂಸದೆ ಡಾ. ಪ್ರಭಾ ಸೂಚನೆ



ದಾ ನಗರವಾಣಿ ಸುದ್ದಿ

ದಾವಣಗೆರೆ.ಮೇ.30: ಮುಂಗಾರು ಮಳೆ ಆರಂಭವಾಗಿರುವ ಹಿನ್ನೆಲೆಯಲ್ಲಿ ರೈತರಿಗೆ ಅಗತ್ಯ ಪ್ರಮಾಣದಲ್ಲಿ ಗುಣಮಟ್ಟದ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳು ಯಾವುದೇ ರೀತಿ ಕೊರತೆಯಾಗದಂತೆ ಸಕಾಲದಲ್ಲಿ ಪೂರೈಕೆ ಮಾಡುವ ವ್ಯವಸ್ಥೆ ಕಲ್ಪಿಸಬೇಕು ಎಂದು ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ತಮ್ಮ ಗೃಹಕಚೇರಿಯಲ್ಲಿ ಕೃಷಿ ಇಲಾಖೆಯ ಜಂಟಿ ನಿರ್ದೇಶಕರೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ಕ್ಷೇತ್ರದ ರೈತರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳು ಹಾಗೂ ಸವಾಲುಗಳ ಕುರಿತು ಸಮಗ್ರ ಚರ್ಚೆ ನಡೆಸಿದರು.

ಮುಂಗಾರು ಹಂಗಾಮು ಆರಂಭವಾಗಿರುವುದರಿಂದ ರೈತರು ಬಿತ್ತನೆ ಕಾರ್ಯಗಳಲ್ಲಿ ತೊಡಗಿಕೊಳ್ಳುತ್ತಿದ್ದು, ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳ ಲಭ್ಯತೆ, ದಾಸ್ತಾನು ಸ್ಥಿತಿ ಮತ್ತು ವಿತರಣಾ ವ್ಯವಸ್ಥೆಯ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು.

ರೈತರ ಕೃಷಿ ಚಟುವಟಿಕೆಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಬೀಜ ಮತ್ತು ರಸಗೊಬ್ಬರಗಳ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗದಂತೆ ಅಧಿಕಾರಿಗಳು ನಿರಂತರ ನಿಗಾ ವಹಿಸಬೇಕು ಎಂದು ಸೂಚಿಸಿದರು.

ಸರ್ಕಾರದ ವಿವಿಧ ಕೃಷಿ ಯೋಜನೆಗಳ ಸೌಲಭ್ಯಗಳು ರೈತರಿಗೆ ಸಮರ್ಪಕವಾಗಿ ಹಾಗೂ ಸಕಾಲದಲ್ಲಿ ತಲುಪುವಂತೆ ಪರಿಣಾಮಕಾರಿ ಅನುಷ್ಠಾನಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಇದೇ ವೇಳೆ ಕೃಷಿ ಉತ್ಪಾದಕತೆ ಹೆಚ್ಚಿಸುವುದು, ಕೃಷಿ ವೆಚ್ಚ ಕಡಿಮೆ ಮಾಡುವುದು ಹಾಗೂ ರೈತರ ಆದಾಯವನ್ನು ವೃದ್ಧಿಸುವ ನಿಟ್ಟಿನಲ್ಲಿ ಆಧುನಿಕ ತಂತ್ರಜ್ಞಾನ ಆಧಾರಿತ ಮತ್ತು ಸುಧಾರಿತ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಕುರಿತು ವಿಸ್ತೃತವಾಗಿ ಚರ್ಚಿಸಲಾಯಿತು.

ರೈತರ ಹಿತಾಸಕ್ತಿಗೆ ಆದ್ಯತೆ ನೀಡುವ ಮೂಲಕ ಕೃಷಿ ಕ್ಷೇತ್ರವನ್ನು ಮತ್ತಷ್ಟು ಬಲಪಡಿಸಲು ಇಲಾಖೆಯ ಅಧಿಕಾರಿಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು ಎಂದು ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದರು.

# ಯಶಸ್ಸಿಗೆ ಕಠಿಣ ಅಧ್ಯಯನ ಬೇಕು: ರುದ್ರಪ್ಪ ಲಮಾಣಿ



ದಾ ನಗರವಾಣಿ ಸುದ್ದಿ

ರಾಣೇಬೆನ್ನೂರು, ಮೇ.30: ಗುರುಗಳ ಮಾರ್ಗದರ್ಶನದೊಂದಿಗೆ ಸತತ ಅಧ್ಯಯನಶೀಲರಾದರೆ ಮಾತ್ರ ಯಶಸ್ಸು ಗಳಿಸಲು ಸಾಧ್ಯ ಎಂದು ಡೆಪ್ಯೂಟಿ ಸ್ಪೀಕರ್ ರುದ್ರಪ್ಪ ಲಮಾಣಿ ಹೇಳಿದರು.

ನಗರದ ಬಿ.ಎ.ಜೆ.ಎಸ್.ಎಸ್. ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯದಲ್ಲಿ ಪಠ್ಯೇತರ ಚಟುವಟಿಕೆಗಳ ಸಮಾರೋಪ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿನಿಯರ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದರು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪಠ್ಯದ ಜೊತೆಗೆ ಕೌಶಲ್ಯವನ್ನು ಅಳವಡಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಸಾಹಿತಿ ಹಾಗೂ ನಿವೃತ್ತ ಉಪನ್ಯಾಸಕಿ ಸುಮತಿ ಜಯಪ್ಪಮಾತನಾಡಿ, ವಿದ್ಯಾರ್ಥಿನಿಯರು ತಮ್ಮ ಬದುಕನ್ನು ರೂಪಿಸಿಕೊಳ್ಳುವ ವಯಸ್ಸಿನಲ್ಲಿ ಮನಸ್ಸಿಟ್ಟು ಮತ್ತು ಏಕಾಗ್ರತೆಯಿಂದ ಅಧ್ಯಯನ ಮಾಡಬೇಕು, ಕಾಲೇಜು ದಿನಗಳು ಕಳೆಯುವ ವಯಸ್ಸು ಅಲ್ಲ. ಬದುಕನ್ನು ರೂಪಿಸಿಕೊಳ್ಳುವ ಘಟ್ಟ ಅದನ್ನು ಸದುಪಯೋಗಪಡಿಸಿಕೊಂಡು ಜೀವನದಲ್ಲಿ ಯಶಸ್ಸಿನತ್ತ ಸಾಗಿರಿ ಎಂದರು.

ಕಾಲೇಜಿನ ಪ್ರಾಚಾರ್ಯ ಡಾ. ಸುರೇಶ್ ಬಣಕಾರ ಅಧ್ಯಕ್ಷತೆ ವಹಿಸಿದ್ದರು. ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಬಿ.ಕೆ. ಗುಪ್ತಾ ಕಾಲೇಜಿನ ಪ್ರಾಚಾರ್ಯ ಕುಮಾರ ಡಿ.ಕೆ. ಮತ್ತು ಡಾ.ದೇವರಾಜ ಹಂಚಿನಮನಿ, ಎಚ್.ಎ. ಬಿಕ್ಷಾವರ್ತಿಮಠ, ಡಾ. ಬಸವರಾಜ ಮಾಳೇನಹಳ್ಳಿ, ಡಾ. ಚಂದ್ರಶೇಖರ, ಡಾ. ಸುನೀಲ ಹಿರೇಮನಿ, ಡಾ. ಪುಷ್ಪಾಂಜಲಿ ಕಾಂಬಳೆ, ಸಂತೋಷ ಭಜಂತ್ರಿ, ಪೃಥ್ವಿರಾಜ ಕಟ್ಟಿಮನಿ ಮತ್ತು ಕು. ಮೇಘಾ ಹಣ್ಣಿಕೇರಿ, ಚೈತ್ರಾ ಕಮಾಟಿ, ಸವಿತಾ ತಂಡೂರು, ಪವಿತ್ರಾ ಸಿದ್ದಮ್ಮನವರ, ಕಲ್ಪನಾ ಮತ್ತು ಕಾಲೇಜಿನ ಎಲ್ಲಾ ವಿದ್ಯಾರ್ಥಿನಿಯರು ಹಾಗೂ ಬೋಧಕ/ಬೋಧಕೇತರ ಸಿಬ್ಬಂದಿ ವರ್ಗದವರು ಇದ್ದರು.

# ಕರುನಾಡ ರತ್ನ ಶಿಕ್ಷಣ ಪ್ರಶಸ್ತಿಗೆ ಆಯ್ಕೆ



ದಾ ನಗರವಾಣಿ ಸುದ್ದಿ

ರಾಣೇಬೆನ್ನೂರು, ಮೇ.30: ನಗರದ ಆರ್.ಟಿ.ಇ.ಎಸ್ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಪದವಿ ಮಹಾವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ಸಹಾಯಕ ಪ್ರಾಧ್ಯಾಪಕರಾದ ಡಾ. ಸರಸ್ವತಿ. ಎಚ್. ಬಮ್ಮನಾಳ ಅವರಿಗೆ ರಾಜ್ಯ ಮಟ್ಟದ ಕರುನಾಡು ರತ್ನ ಶಿಕ್ಷಣ ಪ್ರಶಸ್ತಿ ಲಭಿಸಿದೆ.

ಇವರ ಶಿಕ್ಷಣ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆಯನ್ನು ಪರಿಗಣಿಸಿ ಕರುನಾಡ ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಬಳಗ, ಬೆಂಗಳೂರು ಇವರು ಹಾವೇರಿಯಲ್ಲಿ ನಡೆದ ರಾಜ್ಯ ಮಟ್ಟದ ಎರಡನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಿದರು.

ಕಾಲೇಜಿನ ಅಧ್ಯಕ್ಷರಾದ ಡಾ‖ ಸಂಜಂಯ ಎಸ್. ಸಾವುಕಾರ ಹಾಗೂ ಕಾರ್ಯದರ್ಶಿ ಸೀತಾ ಕೋಟಿ, ಪ್ರಾಚಾರ್ಯ ಡಾ ರಾಮರೆಡ್ಡಿ ಎಸ್ ರಡ್ಡೇರ, ಐ.ಕ್ಯೂ.ಎ.ಸಿ. ಸಂಯೋಜಕ ಪ್ರವೀಣ ಎನ್ ಎ ಹಾಗೂ ಕಾಲೇಜಿನ ಬೋಧಕ/ಬೋಧಕೇತರ ಸಿಬ್ಬಂದಿಗಳು ಅಭಿನಂದಿಸಿದ್ದಾರೆ.

# ಸವಿತಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ವತಿಯಿಂದ ಪ್ರತಿಭಾ ಪುರಸ್ಕಾರ

ದಾವಣಗೆರೆ: ಸವಿತಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ವತಿಯಿಂದ ಸದಸ್ಯರ ಮಕ್ಕಳಿಗೆ ಹಾಗೂ ದಾವಣಗೆರೆ ತಾಲೂಕು ಸವಿತಾ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು.

ಎಸ್. ಎಸ್. ಎಲ್. ಸಿ. ಮತ್ತು ದ್ವಿತೀಯ ಪಿ. ಯು. ಸಿ. ಪರೀಕ್ಷೆಯಲ್ಲಿ ಶೇ 60% ಮತ್ತು ಅದಕ್ಕೂ ಮೇಲ್ಪಟ್ಟು ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ತಮ್ಮ ಅಂಕಪಟ್ಟಿ, ಆಧಾರ್ ಕಾರ್ಡ್, ಮತ್ತು ಎರಡು ಭಾವಚಿತ್ರದೊಂದಿಗೆ ದಿನಾಂಕ 30-06-2026 ರ ರೊಳಗೆ ಸವಿತಾ ಕ್ರೆಡಿಟ್ ಕೋ - ಆಫ್ ಸೊಸೈಟಿಯ ಕಛೇರಿಯಲ್ಲಿ ಅರ್ಜಿ ಸಲ್ಲಿಸಬೇಕೆಂದು ಸಂಘದ ಅಧ್ಯಕ್ಷ ಎನ್. ರಂಗಸ್ವಾಮಿ ಕೋರಿದ್ದಾರೆ.

ವಿವರಗಳಿಗೆ ಕಛೇರಿ ದೂರವಾಣಿ ಸಂಖ್ಯೆ 08192-271329 ಗೆ ಸಂಪರ್ಕಿಸಬಹುದು.

# ಸಂಪುಟದಲ್ಲಿ ಪ್ರಿಯಾಂಕ್‌ಗೆ ಡಿಸಿಎಂ ಸ್ಥಾನ ನೀಡಲು ಒತ್ತಾಯ!

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಯ ನಂತರ ರಾಜ್ಯದಲ್ಲಿ ಹೊಸ ಸಚಿವ ಸಂಪುಟ ರಚನೆಯ ಕಸರತ್ತು ನಡೆಯುತ್ತಿರುವಂತೆಯೇ ಪ್ರಿಯಾಂಕ್ ಖರ್ಗೆ ಅವರನ್ನು ಉಪಮುಖ್ಯಮಂತ್ರಿಯನ್ನಾಗಿ ಮಾಡಬೇಕು ಎಂಬ ಒತ್ತಡ ಹೆಚ್ಚಾಗುತ್ತಿದೆ.

ಎಎನ್‌ಐ ಜೊತೆ ಮಾತನಾಡಿದ ಕಾಂಗ್ರೆಸ್ ಎಂಎಲ್‌ಸಿ ಜಗದೇವ್ ಗುತ್ತೇದಾರ್, ವಿರೋಧ ಪಕ್ಷದ ದಾಳಿಯಿಂದ ಪಕ್ಷವನ್ನು ನಿರಂತರವಾಗಿ ಸಮರ್ಥಿಸಿಕೊಳ್ಳುವ ಪ್ರಿಯಾಂಕ್ ಖರ್ಗೆ ಅವರನ್ನು ಉಪಮುಖ್ಯಮಂತ್ರಿಯನ್ನಾಗಿ ಮಾಡಬೇಕು. ಇದರಿಂದ ರಾಜ್ಯದಲ್ಲಿ ಪಕ್ಷ ಬಲಗೊಳ್ಳುತ್ತದೆ ಎಂದು ಒತ್ತಾಯಿಸಿದರು.

ನಮ್ಮ ಪ್ರಿಯಾಂಕ್ ಖರ್ಗೆ ಸಾಹೇಬ್ ಅವರನ್ನು ಉಪಮುಖ್ಯಮಂತ್ರಿಯನ್ನಾಗಿ ಮಾಡಿದರೆ, ಪಕ್ಷ ಬಲಗೊಳ್ಳುತ್ತದೆ. ವಿರೋಧ ಪಕ್ಷಗಳು ನಮ್ಮ ಪಕ್ಷದ ಮೇಲೆ ದಾಳಿ ಮಾಡಿದಾಗ ತಕ್ಷಣ ಪ್ರತಿಕ್ರಿಯಿಸುವ ವ್ಯಕ್ತಿ ಪ್ರಿಯಾಂಕ್ ಖರ್ಗೆ" ಎಂದು ಗುತ್ತೇದಾರ್ ಹೇಳಿದರು.

ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳಲಿರುವ ಪಕ್ಷದ ನಾಯಕ ಡಿ.ಕೆ. ಶಿವಕುಮಾರ್ , ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಭೇಟಿ ಮಾಡಿದ್ದು, ಸಂಜೆ ನಡೆಯಲಿರುವ ಕಾಂಗ್ರೆಸ್ ಶಾಸಕಾಂಗ ಸಭೆ ಬಗ್ಗೆ ತಿಳಿಸಿದ್ದಾರೆ.

ಈ ಮಧ್ಯೆ ವಿರೋಧ ಪಕ್ಷ ಬಿಜೆಪಿ ಕಾಂಗ್ರೆಸ್ ಮೇಲೆ ತನ್ನ ದಾಳಿಯನ್ನು ತೀವ್ರಗೊಳಿಸಿದ್ದು, ಸಿದ್ದರಾಮಯ್ಯ ಮತ್ತು ಶಿವಕುಮಾರ್ ನಡುವಿನ "ಒಳಜಗಳ ರಾಜ್ಯದಲ್ಲಿ ಆಡಳಿತದ ಮೇಲೆ ಪರಿಣಾಮ ಬೀರಿದೆ ಎಂದು ಆರೋಪಿಸಿದೆ.

# ಪರಮಾಣು ದಾಳಿಯಿಂದ ರಕ್ಷಣೆ, ಪ್ರತಿದಾಳಿಗೆ ಚೀನಾ ಮಾಸ್ಟರ್ ಪ್ಲಾನ್

ಬೀಜಿಂಗ್: ಚೀನಾ ತನ್ನ ಪರಮಾಣು ಕ್ಷಿಪಣಿ ಸೈಲೋಗಳ ಬಳಿ ಹೊಸ ಲಾಂಚ್ ಪ್ಯಾಡ್‌ಗಳನ್ನು ನಿರ್ಮಿಸುತ್ತಿರುವುದನ್ನು ಉಪಗ್ರಹ ಚಿತ್ರಗಳು ಬಹಿರಂಗಪಡಿಸಿವೆ. ಇತ್ತೀಚಿನ ಉಪಗ್ರಹ ಚಿತ್ರಗಳ ಪ್ರಕಾರ, ಚೀನಾ ತನ್ನ ಶಿಂಜಿಯಾಂಗ್ ಪ್ರಾಂತ್ಯದ ನಿರ್ಜನ ಮರುಭೂಮಿ ಪ್ರದೇಶಗಳಲ್ಲಿರುವ ಪರಮಾಣು ಕ್ಷಿಪಣಿ ಸೈಲೋಗಳ ಬಳಿ 80ಕ್ಕೂ ಹೆಚ್ಚು ಲಾಂಚ್ ಪ್ಯಾಡ್‌ಗಳು, ಬಂಕರ್‌ಗಳು ಮತ್ತು ಮಿಲಿಟರಿ ನೆಲೆಗಳನ್ನು ನಿರ್ಮಿಸುತ್ತಿದೆ.

ಎದುರಾಳಿಗಳ ಮೊದಲ ಪರಮಾಣು ದಾಳಿಯಿಂದ ಬದುಕುಳಿದು, ನಂತರ ಪ್ರಬಲ ತಿರುಗೇಟು ನೀಡುವ ಚೀನಾದ ಕಾರ್ಯತಂತ್ರದ ಭಾಗವಾಗಿ ಈ ಭಾರಿ ಮಿಲಿಟರಿ ವಿಸ್ತರಣೆ ನಡೆಯುತ್ತಿದೆ ಎಂದು ಹೇಳಲಾಗಿದೆ.

ಮೂಲಗಳ ಪ್ರಕಾರ ಈ ಉಪಗ್ರಹ ಚಿತ್ರಗಳಲ್ಲಿರುವಂತೆ ಚೀನಾ, ಹಾಮಿ ಮತ್ತು ಯುಮೆನ್ ಕ್ಷಿಪಣಿ ಸೈಲೋ ಪ್ರದೇಶಗಳ ಬಳಿ ಕಾಂಕ್ರೀಟ್‌ನಿಂದ ಮಾಡಿದ 80ಕ್ಕೂ ಹೆಚ್ಚು ಲಾಂಚ್ ಪ್ಯಾಡ್‌ಗಳನ್ನು ನಿರ್ಮಿಸಿದ್ದು, ಇದಲ್ಲದೆ ಚೀನಾ ಸೇನೆಯು ಕನಿಷ್ಠ ಮೂರು ಬೃಹತ್ ಅಷ್ಟಭುಜಾಕೃತಿಯ ಮಿಲಿಟರಿ ನೆಲೆಗಳನ್ನು ಸಿದ್ಧಪಡಿಸಿದೆ.

**CHANGE OF NAME**

I, **MOHAMMED AJMAL** (new name), previously called **MOHAMED AJMAL** (old name), residing at Door No 124/39, Bismillah Extension, Davangere-577001 have chnaged my name as **MOHAMMED AJMAL** vide affidavit dated 23-05-2026 sworn before Notary B. Lingaraj, Davangere. Henceforth all my transactions & dealings will be in my new name **MOHAMMED AJMAL.**

**CHANGE OF NAME**

I, **Sunil Kumar H.R.** & **Kavita Channabasappa** (Old Name) R/o Hale Soude Dipo, 2nd Cross, Honnali, Davangere-577217, Karnataka. We have changed our daughter name from **Nishvika** (Old Name) to **Nishvika Raju Sunil** (New Name) vide affidavit on 30-5-2026 sworn before Notary M. Prathaparudra, Davanagere. In future our daughter all dealings & transactions will be in her new name.
Sd/- **Sunil Kumar H.R.**
& **Kavita Channabasappa**

**CHANGE OF NAME**

I, **Muheebulla** (Old Name) R/o # 54, Pipe Line Road, Banda Nawaz Layout, Davangere-577001, Karnataka. I have changed my name as **Syed Muheebulla** (New Name) vide affidavit on 29-5-2026 sworn before Notary B. Lingaraj, Davanagere. In future all my dealings & transactions will be in my new name.
Sd/- **Syed Muheebulla**

**CHANGE OF NAME**

I, **BATHOOLA AKTHAR** (new name), previously called **BATHOOLA AKHTAR** (old name), residing at Door No 124/39, Bismillah Extension, Davangere-577001 have chnaged my name as **BATHOOLA AKTHAR** vide affidavit dated 23-05-2026 sworn before Notary B. Lingaraj, Davangere. Henceforth all my transactions & dealings will be in my new name **BATHOOLA AKTHAR.**

**ಹೆಸರು ಸ್ಪಷ್ಟೀಕರಣ**

ನಾನು, ಶ್ರೀಮತಿ ರೇಖಾ ರುದ್ರದೇವರಮಠ ಕೋಂ ನಿತ್ಯಾನಂದಸ್ವಾಮಿ ರುದ್ರದೇವರಮಠ, ವಾಸ: #807,3ನೇ ಮೇನ್, ಯರಿಕುಪ್ಪೆ ರಸ್ತೆ, ಮಾರುತಿ ನಗರ, ರಾಣೆಬೆನ್ನೂರು ಟೌನ್, ರಾಣೇಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆ, ಕರ್ನಾಟಕ-581115 ವಾಸಿಯಾದ ನಾನು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಹೇಳುವುದೇನೆಂದರೆ, ನಾನು ದಿನಾಂಕ 03-06-2020 ರಂದು ಸೃಷ್ಟಿ ಸ್ಪೆಷಾಲಿಟಿ ಆಸ್ಪತ್ರೆ, ದಾವಣಗೆರೆ ಇಲ್ಲಿ ಹೆಣ್ಣು ಮಗುವಿಗೆ ಜನ್ಮ ನೀಡಿದ್ದು, ಸದರಿ ನನ್ನ ಮಗುವಿನ ಜನನ ಪ್ರಮಾಣ ಪತ್ರದಲ್ಲಿ ಮಗುವಿನ ಹೆಸರು ಸನ್ನಿಧಿ ನಿತ್ಯಾನಂದಸ್ವಾಮಿ ರುದ್ರದೇವರಮಠ ಎಂದು ತಪ್ಪಾಗಿ ನಮೂದಾಗಿರುತ್ತದೆ. ಆದ್ದರಿಂದ ಮಗುವಿನ ಹೆಸರನ್ನು **ಸನ್ನಿಧಿ ರುದ್ರದೇವರಮಠ (SANNIDHI RUDRADEVARAMATH)** ಎಂದು ಸರಿಯಾಗಿಸಿ ಸಂಬಂಧಪಟ್ಟ ಅಧಿಕಾರಿಗಳ ಮುಂದೆ ಹಾಜರುಪಡಿಸಲು ದಿನಾಂಕ 26-05-2026 ರಂದು ದಾವಣಗೆರೆ ನೋಟರಿ ಎಂ ಪ್ರತಾಪರುದ್ರ ಅವರ ಬಳಿ ಮೇಲೆ ತಿಳಿಸಿದ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣ ಪತ್ರ ಮಾಡಿಸಿರುತ್ತೇನೆ.
- ಶ್ರೀಮತಿ ರೇಖಾ ರುದ್ರದೇವರಮಠ ಕೋಂ ನಿತ್ಯಾನಂದಸ್ವಾಮಿ ರುದ್ರದೇವರಮಠ

**M.S.I.L**

ವಿದ್ಯಾ ಕಿಂಗ್ ಮತ್ತು ಲಾಂಗ್ ನೋಟ್ ಪುಸ್ತಕಗಳು ಸಗಟು ಬೆಲೆಯಲ್ಲಿ ದೊರೆಯುತ್ತವೆ.
ಒಮ್ಮೆ ಭೇಟಿ ಕೊಡಿ
**ಕಿರಣ್ ಜನರಲ್ ಸ್ಟೋರ್**
ಮಂಡಿಪೇಟೆ, ದಾವಣಗೆರೆ
**9448115270**

# ವಿದ್ಯಾರ್ಥಿಗಳ ಭವಿಷ್ಯ ರೂಪಿಸಿದ ಶಿಕ್ಷಕ ವೃತ್ತಿ ಜೀವನ ತೃಪ್ತಿ ತಂದಿದೆ: ಮಂಜಪ್ಪ



ದಾ.ನಗರವಾಣಿ ಸುದ್ದಿ,

ಜಗಳೂರು,ಮೇ.30:34 ವರ್ಷಗಳ ಸೇವೆಯಲ್ಲಿ ನೂರಾರು ವಿದ್ಯಾರ್ಥಿಗಳ ಭವಿಷ್ಯ ರೂಪಿಸಿದ ಶಿಕ್ಷಕ ವೃತ್ತಿಜೀವನ ತೃಪ್ತಿತಂದಿದೆ ಎಂದು ನಿವೃತ್ತ ಮುಖ್ಯ ಶಿಕ್ಷಕ ದಿದ್ದಿಗಿ ಮಂಜಪ್ಪ ಅಭಿಪ್ರಾಯ ವ್ಯಕ್ತಪಡಿಸಿದರು.

ತಾಲ್ಲೂಕಿನ ಗುರುಸಿದ್ದಾಪುರ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಮುಖ್ಯಶಿಕ್ಷಕ ದಿದ್ದಿಗಿ ಮಂಜಪ್ಪ ಅವರಿಗೆ ವಯೋನಿವೃತ್ತಿ ಹಿನ್ನೆಲೆ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಗುರುಸಿದ್ದಾಪುರದಿಂದ ಕೂಗಳತೆಯ ಹನುಮನಹಳ್ಳಿ ಮಣ್ಣಿನಲ್ಲಿ ಜನಿಸಿರುವೆ. ಪಕ್ಕದ ಗುರುಸಿದ್ದಾಪುರ ಗ್ರಾಮದಲ್ಲಿ ಮಾಜಿ ಶಾಸಕ ಬಸಪ್ಪ ಅವರ ಆಡಳಿತಾವಧಿಯಲ್ಲಿ ಪ್ರೌಢಶಾಲೆ ಸ್ಥಾಪನೆಗೊಂಡ ಸಂದರ್ಭದಲ್ಲಿ ಯಾವುದೇ ತಂತ್ರಜ್ಞಾನ,ಸಾರಿಗೆ ಸಂಪರ್ಕವಿಲ್ಲದೆ ಸಾಕಷ್ಟು ಸಮಸ್ಯೆಗಳ ಮಧ್ಯೆ ಶಾಲೆ ಉಳಿಸಿದೆವು.ಇದೀಗ 200ಕ್ಕೂ ಅಧಿಕ ದಾಖಲಾತಿ ಹೊಂದಿರುವ ಶಾಲೆಯಾಗಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಪಡೆದಿದೆ. ನಾನು ಇದೇ ಶಾಲೆಯಲ್ಲಿ ನಿವೃತ್ತಿ ಹೊಂದಿರುವುದು ನನ್ನ ಸೌಭಾಗ್ಯ ಎಂದು ಹರ್ಷ ವ್ಯಕ್ತಪಡಿಸಿದರು.

ಸಹುದ್ಯೋಗಿಗಳ ಸಹಕಾರದಿಂದ ಶಾಲೆಯಲ್ಲಿ ಶಿಕ್ಷಣ ಕ್ಷೇತ್ರದ ಸವಾಲುಗಳನ್ನು ಎದುರಿಸಿರುವೆ. ಮುಖ್ಯ ಶಿಕ್ಷಕರಾಗಿ ಆಗಮಿಸುವವರು ಶೈಕ್ಷಣಿಕ ಚಟುವಟಿಕೆಗಳಿಗೆ ದಕ್ಕೆಯಾಗದಂತೆ ನಿಭಾಯಿಸಬೇಕು. ಎರಡು ಖಾಲಿ ಹುದ್ದೆಗಳಿಗೆ ಶೀಘ್ರದಲ್ಲಿ ಶಿಕ್ಷಕರ ನಿಯೋಜನೆಗೊಳ್ಳಲಿದ್ದಾರೆ ಎಂದರು.

ವೇದಿಕೆಯಲ್ಲಿ ಬಿಇಓ ಹಾಲಮೂರ್ತಿ ಮಾತನಾಡಿ, ದಿದ್ದಿಗಿ ಮಂಜಪ್ಪ ಅವರು ಬಿಇಓ ಕಛೇರಿಯಲ್ಲಿ ಇಸಿಓ ಆಗಿ ಎಲ್ಲರ ವಿಶ್ವಾಸ ಗಳಿಸಿದ್ದರು. ಶಿಕ್ಷಕ ವೃತ್ತಿಯಲ್ಲಿ ನಿರಂತರ ಸೇವೆಗೈದು, ಉತ್ತಮ ಬಾಂಧವ್ಯದೊಂದಿಗೆ ಪ್ರೌಢಶಾಲಾ ಶಿಕ್ಷಕರ ಸಂಘದಲ್ಲಿಯೂ ಸ್ಥಾನಮಾನ ಗಳಿಸಿದ್ದರು. ದೇಶಕ್ಕೆ ಪೂರಕವಾದ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವುದಲ್ಲದೆ, ದಂಪತಿಗಳಿಬ್ಬರೂ ಶಿಕ್ಷಕರಾಗಿದ್ದು ತಮ್ಮ ಇಬ್ಬರು ಮಕ್ಕಳನ್ನೂ ಮೆಡಿಕಲ್ ವಿದ್ಯಾಭ್ಯಾಸ ಕೊಡಿಸಿ ಮಾದರಿಯಾಗಿದ್ದಾರೆ.ಅವರ ನಿವೃತ್ತಿ ಜೀವನ ಸುಖಕರವಾಗಲಿ ಎಂದು ಹಾರೈಸಿದರು.

ನೌಕರರ ಸಂಘದ ಮಾಜಿ ಅಧ್ಯಕ್ಷ ಹಾಗೂ ಮುಖ್ಯ ಶಿಕ್ಷಕ ಚಂದ್ರಪ್ಪ ಮಾತನಾಡಿ, ದಿದ್ದಿಗಿ ಮಂಜಪ್ಪ ಅವರ ಶಿಸ್ತು, ಉತ್ಸಾಹ, ಜ್ಞಾನ ಸಂಪತ್ತು, ಸಂಘಟನಾ ಚತುರತೆಯಿಂದ ತಾಲ್ಲೂಕಿನ ಶಿಕ್ಷಣ ಇಲಾಖೆಯ ಪ್ರಗತಿಗೆ ಸಾಕ್ಷಿಯಾಗಿದೆ.ತಾಲ್ಲೂಕಿನಲ್ಲಿ ಗಡಿಭಾಗದ ಶಿಕ್ಷಕರ ವಿಶ್ವಾಸ ಗಳಿಸಿ ಶೈಕ್ಷಣಿಕ ಸಮಸ್ಯೆಗಳನ್ನು ಬಗೆಹರಿಸುವ ಕೌಶಲ್ಯ ಹೊಂದಿದ್ದರು ಸದಾ ಸ್ಫೂರ್ತಿಯಾಗಿದ್ದರು ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿಆರ್‌ಸಿ ಡಿಡಿ ಹಾಲಪ್ಪ, ಶಿಕ್ಷಕಿ ನೀಲಾಂಬಿಕೆ ಮಂಜಪ್ಪ, ಪ್ರೌಢಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಅಧ್ಯಕ್ಷ ಮಹಾಂತೇಶ್, ಪದಾಧಿಕಾರಿಗಳಾದ ಮಧು, ಕಲ್ಲಿನಾಥ್, ಬಾಲರಾಜ್, ಸಿದ್ಲಿಂಗಪ್ಪ, ಶಿಕ್ಷಕರಾದ ವಿಶ್ವನಾಥ್, ಆಶಾ, ತಿಪ್ಪೇಸ್ವಾಮಿ, ನಿ.ಶಿಕ್ಷಕರಾದ ಜಯಶೀಲ ರೆಡ್ಡಿ, ಮಾದಿಹಳ್ಳಿ ರವಿ ಸೇರಿದಂತೆ ಇದ್ದರು.

# ಶಿಕ್ಷಣದಿಂದ ಮಾತ್ರ ಎಲ್ಲ ಹಕ್ಕು ಪಡೆಯಲು ಸಾಧ್ಯ-ಬಿ.ಪಿ. ಹರೀಶ್



ದಾ ನಗರವಾಣಿ ಸುದ್ದಿ

ಹರಿಹರ: ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಿದಲ್ಲಿ ಮಾತ್ರ ಸರ್ವವನ್ನೂ ಸಂಪಾದಿಸಲು ಸಾಧ್ಯ ಎಂದು ಶಾಸಕ ಬಿ.ಪಿ. ಹರೀಶ್ ತಿಳಿಸಿದರು.

ಮಾದರ ಚೆನ್ನಯ್ಯ ಜಯಂತಿ ಅಂಗವಾಗಿ ತಾಲೂಕು ಮಾದಿಗ ಸಮಾಜದ ವತಿಯಿಂದ ನಗರದ ಕಾಟ್ವೆ ಸಮುದಾಯ ಭವನದಲ್ಲಿ ಶನಿವಾರ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ, ಬಡ ವಿದ್ಯಾರ್ಥಿಗಳಿಗೆ ಉಚಿತ ಕಿಟ್ ವಿತರಣೆ ಹಾಗೂ ಜನಜಾಗೃತಿ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಎಲ್ಲ ಹಕ್ಕುಗಳನ್ನು ನೀಡಿದ್ದು, ಅದರ ಸಮಗ್ರ ಲಾಭ ಪಡೆಯಲು ಪ್ರತಿಯೊಬ್ಬರೂ ಸುಶಿಕ್ಷಿತರಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ತಾಲೂಕು ಮಾದಿಗ ಸಮಾಜದ ಅಧ್ಯಕ್ಷ ಎಂ.ಎಸ್. ಆನಂದಕುಮಾರ್ ಮಾತನಾಡಿ, ಕಳೆದ 7 ವರ್ಷಗಳಿಂದ ಈ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. ಈ ವರ್ಷ 2024-25 ಹಾಗೂ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.75ಕ್ಕೂ ಹೆಚ್ಚು ಅಂಕ ಗಳಿಸಿದ 65 ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸಿ, 300 ಬಡ ವಿದ್ಯಾರ್ಥಿಗಳಿಗೆ ಉಚಿತ ಶೈಕ್ಷಣಿಕ ಕಿಟ್ ವಿತರಿಸಲಾಗಿದೆ. ಸಮಾಜದ ಏಳಿಗೆಗೆ ಎಲ್ಲರ ಸಹಕಾರ ಅತ್ಯಗತ್ಯ ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಹೊನ್ನಾಳಿಯ ನ್ಯಾಯವಾದಿ ಎಂ.ಸಿ.ಮೋಹನ್‌ಕುಮಾರ್ ಅವರು 'ಒಳಮೀಸಲಾತಿ, ಶಿಕ್ಷಣ ಮತ್ತು ಉದ್ಯೋಗ' ಕುರಿತು ವಿಶೇಷ ಉಪನ್ಯಾಸ ನೀಡಿದರು. ನಿವೃತ್ತ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿರವಿನಾರಾಯಣ್ ಶಿಕ್ಷಣದ ಮಹತ್ವ ತಿಳಿಸಿ ಸಮಾಜ ಬಾಂಧವರಲ್ಲಿ ಜಾಗೃತಿ ಮೂಡಿಸಿದರು. ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಎ.ಕೆ. ಭೂಮೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ರಾಜ್ಯ ಮರಾಠ ಅಭಿವೃದ್ಧಿ ನಿಗಮದ ಅಧ್ಯಕ್ಷಜಿ. ಎಚ್. ಮರಿಯೋಜಿರಾವ್ ಶಾಲಾ ಮಕ್ಕಳಿಗೆ ಶೈಕ್ಷಣಿಕ ಕಿಟ್‌ಗಳನ್ನು ವಿತರಿಸಿದರು. ಮಾಜಿ ಶಾಸಕ ಎಸ್. ರಾಮಪ್ಪ, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎನ್.ಎಚ್.ಶ್ರೀನಿವಾಸ್ ನಂದಿಗಾವಿ, ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಮುಖಂಡ ಹಾಲೇಶಗೌಡ್ರು ಹಾಗೂ ತಾಲೂಕು ಮಾದಿಗ ಸಮಾಜದ ಗೌರವಾಧ್ಯಕ್ಷಎಲ್.ಬಿ. ಹನುಮಂತಪ್ಪ ಅವರು ಮಾದರಚೆನ್ನಯ್ಯ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಎಲ್‌ಐಸಿ ನಿವೃತ್ತ ಅಧಿಕಾರಿ ಎಂ.ಬಿ. ಧರ್ಮದತ್, ಉಪಾಧ್ಯಕ್ಷರಾದ ಹನುಮಂತಪ್ಪ ದೊಡ್ಮನೆ ಹಳ್ಳಿಹಾಳ್, ಎಂ.ಎಸ್. ಶ್ರೀನಿವಾಸ್, ಕಾರ್ಯದರ್ಶಿ ಎಚ್.ಶಿವಪ್ಪ, ನಿರ್ದೇಶಕರುಗಳಾದ ಬಿ.ಡಿ. ಬಸವರಾಜಪ್ಪ ಕೊಕ್ಕನೂರು, ಎಚ್.ಎಂ. ಹನುಮಂತಪ್ಪ ಬನ್ನಿಕೋಡ್, ಎ.ಕೆ. ನಾಗೇಂದ್ರಪ್ಪ ರಾಜನಹಳ್ಳಿ, ಚೌಡಪ್ಪ ಹೊಳೆಸಿರಿಗೆರೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಚಿತ್ರದುರ್ಗ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಶಾಸಕ ರಘುಮೂರ್ತಿ ಅವಿರೋಧ ಆಯ್ಕೆ



ದಾ.ನಗರವಾಣಿ ಸುದ್ದಿ

ಚಳ್ಳಕೆರೆ.ಮೇ.30: ಚಿತ್ರದುರ್ಗ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (ಡಿಸಿಸಿಬಿ) ಅಧ್ಯಕ್ಷರಾಗಿ ಚಳ್ಳಕೆರೆ ಕ್ಷೇತ್ರದ ಶಾಸಕ ಟಿ. ರಘುಮೂರ್ತಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದು, ಈ ಹಿನ್ನೆಲೆಯಲ್ಲಿ ಜಿಲ್ಲೆಯ ಹಿರಿಯ ರಾಜಕೀಯ ಮುಖಂಡರು ಹಾಗೂ ವಿವಿಧ ಮಂಡಳಿಗಳ ಅಧ್ಯಕ್ಷರು ನೂತನ ಅಧ್ಯಕ್ಷರನ್ನು ಭೇಟಿಯಾಗಿ ಅಭಿನಂದನೆ ಸಲ್ಲಿಸಿದರು.

ಮಾಜಿ ಸಂಸದ ಬಿ.ಎನ್. ಚಂದ್ರಪ್ಪ, ಕರ್ನಾಟಕ ಆದಿ ಜಾಂಭವ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಎಸ್. ಮಂಜುನಾಥ್ ಹಾಗೂ ಚಿತ್ರದುರ್ಗ ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಹಾಲೇಶ್ ಅವರು ನೂತನ ಅಧ್ಯಕ್ಷರನ್ನು ಭೇಟಿಯಾಗಿ ಪುಷ್ಪಗುಚ್ಛ ನೀಡಿ ಶುಭ ಹಾರೈಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಶಾಸಕ ಟಿ. ರಘುಮೂರ್ತಿ ಅವರು, "ಆತ್ಮೀಯರ ಶುಭಾಶಯಗಳೇ ನನ್ನ ಶಕ್ತಿಯಾಗಿದೆ. ಜಿಲ್ಲೆಯ ಜನತೆ, ಸಹಕಾರಿ ಕ್ಷೇತ್ರದ ಬಂಧುಗಳು ಮತ್ತು ಪಕ್ಷದ ಮುಖಂಡರು ನನ್ನ ಮೇಲಿಟ್ಟಿರುವ ಪ್ರೀತಿ,ವಿಶ್ವಾಸ ಹಾಗೂ ಆಶೀರ್ವಾದ ನನ್ನ ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿಸಿದೆ. ಜಿಲ್ಲೆಯ ಸಹಕಾರ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಲು ಈ ಆಯ್ಕೆ ನನಗೆ ಮತ್ತಷ್ಟು ಪ್ರೇರಣೆ ನೀಡಿದೆ" ಎಂದು ಕೃತಜ್ಞತೆ ಸಲ್ಲಿಸಿದರು.